ಹೆಚ್ಚುವರಿ ಅನುದಾನದ ಕುರಿತು, ಈ ಕೆಳಗಿನ ಅಂಶಗಳಿಗೆ ಸ್ಪಷ್ಟೀಕರಣ ನೀಡುವಂತೆ ಜಿಲ್ಲಾಧಿಕಾರಿ, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರಿಗೆ ದಿನಾಂಕ: 04.07.2022ರಂದು ಪತ್ರ ಬರೆಯಲಾಗಿದೆ.

......2

1. ಮೂಲತಃ ಆಡಳಿತಾತ್ಮಕ ಅನುಮೋದನೆ ನೀಡಿರುವ ಮೊತ್ತ ಎಷ್ಟು ಹಾಗೂ ಈವರೆವಿಗೆ ಬಿಡುಗಡೆ ಮಾಡಿರುವ ವಿವರವೇನು?
2. ಈಗ ಪ್ರತ್ಯೇಕವಾಗಿ ರೂ. 402.60 ಲಕ್ಷಗಳು ಕೋರಿದ್ದು, ಇದು ಯಾವ ಕಾಮಗಾರಿಗಾಗಿ?
3. ಆಡಳಿತಾತ್ಮಕ ಅನುಮೋದನೆ ನೀಡಿರುವ ವೆಚ್ಚವನ್ನು ಮೀರಿ ಕೋರಲಾಗುತ್ತಿದೆಯೇ? ಹಾಗಿದ್ದಲ್ಲಿ ಇದಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿದ ಅಂದಾಜು ಪಟ್ಟಿಯಲ್ಲಿ ಬದಲಾವಣೆ ಮಾಡಲಾಗಿದೆಯೇ ಹಾಗೂ ಅದಕ್ಕೆ ಪೂರ್ವಾನುಮತಿ ಪಡೆಯಲಾಗಿದೆಯೇ?

ಜಿಲ್ಲಾಧಿಕಾರಿ, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರಿಂದ ಸ್ಪಷ್ಟೀಕರಣ ಸ್ವೀಕೃತಗೊಂಡ ನಂತರ, ಹೆಚ್ಚುವರಿ ಅನುದಾನ ಬಿಡುಗಡೆಗೆ ಕೋರಿ ಆರ್ಥಿಕ ಇಲಾಖೆಗೆ ಸಲ್ಲಿಸಿರುವ ಪ್ರಸ್ತಾವನೆಗೆ, ಸದರಿ ಸ್ಪಷ್ಟೀಕರಣವನ್ನು ಒದಗಿಸಿ, ಕೂಡಲೇ ಹೆಚ್ಚುವರಿ ಅನುದಾನ ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲು ಕ್ರಮವಹಿಸಲಾಗುವುದು.

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	145
2)	ಮಾನ್ಯ ಸದಸ್ಯರ ಹೆಸರು	ಶ್ರೀ ರಘುಮೂರ್ತಿ ಟಿ. (ಚಳ್ಳಕೆರೆ)
3)	ಉತ್ತರಿಸಬೇಕಾದ ದಿನಾಂಕ	15-09-2022
4)	ಉತ್ತರಿಸುವವರು	ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ) ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ನಗರದಲ್ಲಿ ಹೊಸದಾಗಿ ಸರ್ಕಾರಿ ಜಿ.ಟಿ.ಟಿ.ಸಿ ಕೇಂದ್ರವನ್ನು ಯಾವ ಆರ್ಥಿಕ ವರ್ಷದಲ್ಲಿ ಪ್ರಾರಂಭಿಸಲಾಗಿದೆ; (ವಿವರ ನೀಡುವುದು)</td><td>2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ನಗರದಲ್ಲಿ ನೂತನವಾಗಿ ಸರ್ಕಾರಿ ಜಿ.ಟಿ.ಟಿ.ಸಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ.</td></tr>
<tr><td>(ಆ) ಜಿ.ಟಿ.ಟಿ.ಸಿ ಕೇಂದ್ರದ ಹೊಸ ಕಟ್ಟಡ ನಿರ್ಮಾಣಕ್ಕೆ ಬಿಡುಗಡೆ ಮಾಡಲಾದ ಅನುದಾನ ಎಷ್ಟು; ಉಪಕರಣಗಳಿಗೆ ಬಿಡುಗಡೆ ಮಾಡಲಾಗಿರುವ ಅನುದಾನ ಪೂರ್ಣ ವಿವರ ನೀಡುವುದು;</td><td>ಚಳ್ಳಕೆರೆ ಜಿಟಿಟಿಸಿ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ನಬಾರ್ಡ್ ಯೋಜನೆಯಡಿ ಸರ್ಕಾರಿ ಆದೇಶಸಂಖ್ಯೆ: ಕೌಉಜೀಇ 241 ಕೈತಇ 2017 ಬೆಂಗಳೂರು ದಿನಾಂಕ:14-09-2018ರಲ್ಲಿ ರೂ.2564 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ (ಅನುಬಂಧ-1ರಲ್ಲಿ ವಿವರ ಲಗತ್ತಿಸಿದೆ.)

ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನದ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ:

(ರೂ.ಲಕ್ಷಗಳಲ್ಲಿ)
<table>
<tr><th>ಕ್ರಸಂಖ್ಯೆ</th><th>ಯೋಜನೆ</th><th>ವರ್ಷ</th><th>ಬಿಡುಗಡೆಯಾದ ಅನುದಾನ</th></tr>
<tr><td>01</td><td rowspan="2">ನಬಾರ್ಡ್</td><td>2019-20</td><td>1794.00</td></tr>
<tr><td>02</td><td>2020-21</td><td>770.00</td></tr>
<tr><td></td><td colspan="2">ಒಟ್ಟು</td><td>2564.00</td></tr>
</table>
ಯಂತ್ರೋಪಕರಣಗಳಿಗೆ ಬಿಡುಗಡೆಯಾದ ಅನುದಾನದ ವಿವರಗಳು ಈ ಕೆಳಕಂಡಂತಿದೆ;

(ರೂ.ಲಕ್ಷಗಳಲ್ಲಿ)
<table>
<tr><th>ಕ್ರಸಂಖ್ಯೆ</th><th>ಯೋಜನೆ</th><th>ವರ್ಷ</th><th>ಬಿಡುಗಡೆಯಾದ ಅನುದಾನ</th></tr>
<tr><td>01</td><td rowspan="2">ಎಸ್.ಡಿ.ಪಿ</td><td>2020-21</td><td>548.75</td></tr>
<tr><td>02</td><td>2021-22</td><td>388.25</td></tr>
<tr><td></td><td colspan="2">ಒಟ್ಟು</td><td>937.00</td></tr>
</table>
</td></tr>
<tr><td>(ಇ) ಜಿ.ಟಿ.ಟಿ.ಸಿ ಕೇಂದ್ರದಲ್ಲಿ ಎಷ್ಟು ಬೋಧಕ/ಬೋಧಕೇತರ ಸಿಬ್ಬಂದಿ ನೇಮಕಾತಿ ಮಾಡಲಾಗಿದೆ: (ಪೂರ್ಣ ವಿವರ ನೀಡುವುದು)</td><td>ಚಿತ್ರದುರ್ಗ ಜಿಲ್ಲೆಯ ಜಿಟಿಟಿಸಿ ಚಳ್ಳಕೆರೆ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳ ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಲಾಗಿದೆ.</td></tr>
<tr><td>(ಈ) ಸದರಿ ಕೇಂದ್ರಕ್ಕೆ ಸರ್ಕಾರದ ನಿಯಮದಂತೆ ಬೋಧಕ/ಬೋಧಕೇತರ ಸಿಬ್ಬಂದಿ ನೇಮಿಸಲಾಗಿದೆಯೇ; (ಪೂರ್ಣ ವಿವರ ನೀಡುವುದು)</td><td>ಇಲ್ಲ

ಪ್ರಸ್ತುತ ನೂತನವಾಗಿ ಪ್ರಾರಂಭವಾಗಿರುವ ಈ ಜಿ.ಟಿ.ಟಿ.ಸಿ ಕೇಂದ್ರಕ್ಕೆ ಎ.ಐ.ಸಿ.ಟಿ.ಇ (All India Council For Technical Education) ನಿಯಮಾನುಸಾರ 33 ಹುದ್ದೆಗಳನ್ನು ಮಂಜೂರು ಮಾಡಲು ಕ್ರಮವಹಿಸಲಾಗುತ್ತಿದ್ದು, ತಾತ್ಕಾಲಿಕವಾಗಿ ಗುತ್ತಿಗೆ ಮತ್ತು ಅತಿಥಿ ಆಧಾರದ ಮೇಲೆ 22 ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ.</td></tr>
</table>

(ಉ) ಜಿ.ಟಿ.ಟಿ.ಸಿ ಕೇಂದ್ರದಲ್ಲಿ ಕಾರ್ಯಾಗಾರ (Work Shop)ಕ್ಕೆ ಸಂಬಂಧಿಸಿದಂತೆ ಸಂಪೂರ್ಣವಾಗಿ ಯಂತ್ರೋಪಕರಣಗಳನ್ನು ಅಳವಡಿಸಲಾಗಿದೆಯೇ; (ವಿವರ ನೀಡುವುದು)	ಈ ಜಿ.ಟಿ.ಟಿ.ಸಿ ಕೇಂದ್ರದಲ್ಲಿ ಕಾರ್ಯಾಗಾರ ವಿಭಾಗಕ್ಕೆ(Work Shop) Conventional Lathe Machines, Universal Milling Machines, Vertical Milling Machines, Surface Grinding Machines, Cylindrical Grinding Machines, Power Hacksaw Machine, Drilling Machines, CNC Turning Machines, CNC Milling Machine, Tool Presetter, CNC Similator, Electrical Lab equipments, Electronic Lab Equipments, Automation Lab Equipments, Science Lab Equipments, Hydraulic Pneumatics Lab Equipments, Hand Tools, Measuring Instruments, Computer Workstations, Furniture and Fixtures ಮುಂತಾದ ಯಂತ್ರೋಪಕರಣಗಳನ್ನು ಅಳವಡಿಸಿ ದೀರ್ಘಾವಧಿ ಮತ್ತು ಅಲ್ಪಾವಧಿ ತರಬೇತಿ ನೀಡಲಾಗುತ್ತಿದೆ. ಯಂತ್ರೋಪಕರಣಗಳ ವಿವರಗಳನ್ನು ಅನುಬಂಧ–3ರಲ್ಲಿ ಲಗತ್ತಿಸಲಾಗಿದೆ. ಪ್ರಸ್ತುತ ಡಿಪ್ಲೋಮಾ ಮೊದಲನೇ ಮತ್ತು ಎರಡನೇ ವರ್ಷದ ತರಬೇತಿಗಳನ್ನು ಮತ್ತು ಅಲ್ಪಾವಧಿ ತರಬೇತಿಗಳನ್ನು ನೀಡಲು ಮೇಲೆ ತಿಳಿಸಿರುವ ಯಂತ್ರೋಪಕರಣಗಳನ್ನು ಅಳವಡಿಸಲಾಗಿದೆ. ಮುಂದುವರೆದು ಡಿಪ್ಲೋಮಾ 3ನೇ ವರ್ಷದ ತರಬೇತಿಗಳಿಗಾಗಿ ಅವಶ್ಯವಿರುವ ಯಂತ್ರೋಪಕರಣಗಳನ್ನು ಖರೀದಿಸಲು ಹಂತಹಂತವಾಗಿ ಕ್ರಮ ಕೈಗೊಳ್ಳಲಾಗಿದೆ.
(ಊ) ಸದರಿ ಕೇಂದ್ರಕ್ಕೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ? (ವಿವರ ನೀಡುವುದು)	ಹೌದು ಸದರಿ ಕೇಂದ್ರಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯಗಳಾದ ಕಾರ್ಯಾಗಾರ, ತರಬೇತಿ ಕಟ್ಟಡ, ಬಾಲಕರ ವಸತಿ ನಿಲಯ, ಬಾಲಿಕಿಯರ ವಸತಿ ನಿಲಯ, ಸಿಬ್ಬಂದಿಗಳ ವಸತಿ ನಿಲಯ, ಉಪಹಾರಗೃಹ ಮತ್ತು ಯಂತ್ರೋಪಕರಣಗಳನ್ನು ಒದಗಿಸಲಾಗಿದೆ.

ಸಂಖ್ಯೆ: ಕೌಉಜೀಇ 31 ಉಜೀಪ್ರ 2022

(ಡಾ॥ ಸಿ.ಎನ್. ಅಶ್ವಥ್‌ನಾರಾಯಣ)
ಉನ್ನತ ಶಿಕ್ಷಣ, ಐಟಿ–ಬಿಟಿ ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಮತ್ತು
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.

ಅನುಬಂಧ-1

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನಬಾರ್ಡ್ ಆರ್‌ಐಡಿಎಫ್-23ರ ಯೋಜನೆಯಡಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, 5 ಕೇಂದ್ರಗಳಲ್ಲಿ ಕಟ್ಟಡ ಕಾಮಗಾರಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:
1. ಮಾನ್ಯ ಲೋಕೋಪಯೋಗಿ ಸಚಿವರು ಹಾಗೂ ಆರ್.ಐ.ಡಿ.ಎಫ್. ಸಚಿವ ಸಂಪುಟ ಉಪ ಸಮಿತಿಯ ಅಧ್ಯಕ್ಷರು ಇವರ ಸಭಾ ನಡವಳಿ ದಿನಾಂಕ: 26.07.2017
2. ವ್ಯವಸ್ಥಾಪಕ ನಿರ್ದೇಶಕರು, ಜಿ.ಟಿ.ಟಿ.ಸಿ ಇವರ ಪತ್ರ ಸಂಖ್ಯೆ: ಜಿಟಿಟಿಸಿ/ಪ್ರಾ/ಕೌಉಜೀಇ/ನಬಾರ್ಡ್ ಆರ್‌ಐಡಿಎಫ್-23/2017-18, ದಿನಾಂಕ: 02.03.2018.

*****

ಪ್ರಸ್ತಾವನೆ:

2017-18ನೇ ಸಾಲಿನಲ್ಲಿ ನಬಾರ್ಡ್ ಮಂಜೂರಾತಿಯಂತೆ ಮತ್ತು ಸರ್ಕಾರಿ ಉಪಕರಣಾಗಾರ ತರಬೇತಿ ಕೇಂದ್ರ ಸಲ್ಲಿಸಿರುವ ವಿವರವಾದ ಯೋಜನಾ ವರದಿಯಂತೆ ಕಟ್ಟಡ ನಿರ್ಮಾಣ ಮಾಡುವ ಮೂಲಕ ಸರ್ಕಾರಿ ಉಪಕರಣಾಗಾರ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ಮೂಲಭೂತ ಸೌಲಭ್ಯವನ್ನು ಒದಗಿಸಿ ಉತ್ತಮ ಗುಣಮಟ್ಟದ ತರಬೇತಿ ನೀಡಲು ಯೋಜಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಮಾನ್ಯ ಲೋಕೋಪಯೋಗಿ ಸಚಿವರು ಹಾಗೂ ಆರ್.ಐ.ಡಿ.ಎಫ್. ಸಚಿವ ಸಂಪುಟ ಉಪ ಸಮಿತಿಯ ಅಧ್ಯಕ್ಷರು ಇವರ ಸಭಾ ನಡವಳಿಗಳಲ್ಲಿ ನಬಾರ್ಡ್ ಆರ್‌ಐಡಿಎಫ್ ಸಚಿವ ಸಂಪುಟ ಉಪಸಮಿತಿ ಸಭೆಯಲ್ಲಿ ಆರ್‌ಐಡಿಎಫ್-23 ಯೋಜನೆಯಡಿಯಲ್ಲಿ ಹಾಗೂ ನಬಾರ್ಡ್ ಮಂಜೂರಾತಿಯಂತೆ 5 ಜಿಟಿಟಿಸಿ ಕೇಂದ್ರಗಳಿಗೆ ಒಟ್ಟು ರೂ.4935.00 ಲಕ್ಷಗಳ ಸ್ವಂತ ಕಟ್ಟಡ ನಿರ್ಮಾಣ ಕೈಗೊಳ್ಳಲು ಹಂಚಿಕೆಮಾಡಲಾಗಿದೆ. ಈ ಕೇಂದ್ರಗಳಿಗೆ ವಿವರವಾದ ಅಂದಾಜು ಪಟ್ಟಿಗಳನ್ನು ತಯಾರಿಸಿ ಸಿದ್ಧಪಡಿಸಲಾಗಿದೆ. ಸದರಿ 5 ಜಿಟಿಟಿಸಿ ಕೇಂದ್ರಗಳಾದ ಚಳ್ಳಕೆರೆ, ಹಾವೇರಿ, ಮತ್ತು ಮಡಿಕೇರಿ(ಮಾಯಮುಡಿ) ಗಳಲ್ಲಿ ನೂತನವಾಗಿ ಜಿಟಿಟಿಸಿ ಕೇಂದ್ರಗಳನ್ನು ಸ್ಥಾಪಿಸಲು ಹಾಗೂ (ಮೂಲಭೂತ ಸೌಕರ್ಯಾಭಿವೃದ್ಧಿ ಪಡಿಸಲು) ಹಾಲಿ ಕೇಂದ್ರಗಳಾದ ಗೌರಿಬಿದನೂರು ಮತ್ತು ಹುಮ್ನಾಬಾದ್ ಉಪ ಕೇಂದ್ರಗಳಲ್ಲಿ ಒಟ್ಟು ರೂ.4935.00 ಲಕ್ಷಗಳ ಸಾಲ ಮಂಜೂರಾಗಿರುತ್ತದೆ.

ಮೇಲೆ ಓದಲಾದ (2)ರಲ್ಲಿ 2017-18 ನೇ ಸಾಲಿಗೆ ನಬಾರ್ಡ್ ಆರ್‌ಐಡಿಎಫ್- 23ರಲ್ಲಿ 5 ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಉಪ ಕೇಂದ್ರಗಳಾದ ಚಳ್ಳಕೆರೆ, ಹಾವೇರಿ, ಮತ್ತು ಮಡಿಕೇರಿ(ಮಾಯಮುಡಿ) ಗಳಲ್ಲಿ ನೂತನವಾಗಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಹಾಗೂ ಹಾಲಿ ಲಭ್ಯವಿರುವ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಾಭಿವೃದ್ಧಿ ಪಡಿಸಲು ಗೌರಿಬಿದನೂರು ಮತ್ತು ಹುಮ್ನಾಬಾದ್ ಕೇಂದ್ರಗಳಿಗೆ ವಸತಿ ನಿಲಯಗಳ ನಿರ್ಮಾಣದ ಕಟ್ಟಡ ಕಾಮಗಾರಿಗಳಿಗೆ ನಬಾರ್ಡ್‌ನಿಂದ ಒದಗಿಸಲಾಗುವ ಸಾಲದ ಮೊತ್ತ 4194.75 ಲಕ್ಷಗಳು (ಶೇ.85%) ಮತ್ತು ರಾಜ್ಯ ಸರ್ಕಾರದ ಪಾಲು ರೂ. 740.25 ಲಕ್ಷಗಳು

(ಶೇ.15%) ಸೇರಿದಂತೆ ಒಟ್ಟು ರೂ.4935.00 ಲಕ್ಷಗಳಿಗೆ ಈ ಕೆಳಗಿನ ಕೋಷ್ಠಕದಲ್ಲಿ ವಿವರಿಸಿದಂತೆ ಅನುದಾನ, ಮಂಜೂರು ಮಾಡಿ ಮತ್ತು ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿರುತ್ತಾರೆ.

ಕ್ರಸ	ಕೇಂದ್ರ	ಉದ್ದೇಶ	ಒಟ್ಟು ಯೋಜನಾ ವೆಚ್ಚ	2017-18 ನೇ ಸಾಲಿಗೆ ನಬಾರ್ಡನಿಂದ ಒದಗಿಸಲಾಗುವ ಸಾಲದ ಮೊತ್ತ (ಶೇ.85%) (ರೂ. ಲಕ್ಷಗಳಲ್ಲಿ)	ರಾಜ್ಯ ಸರ್ಕಾರದ ಪಾಲು (ಶೇ15%) (ರೂ ಲಕ್ಷಗಳಲ್ಲಿ)	ಒಟ್ಟು ಮೊತ್ತ (ರೂ ಲಕ್ಷಗಳಲ್ಲಿ)	2018-19 ನೇ ಸಾಲಿಗೆ ಕೈಗೊಳ್ಳುವ ಕಾಮಗಾರಿಗಳ ವಿವರ
1	ಚಳ್ಳಕೆರೆ	ತರಬೇತಿ ಕ್ಯಾಂಪಸ್ (ತರಬೇತಿ, ವರ್ಕ್‌ಶಾಪ್, ಕ್ಯಾಂಟೀನ್, ವಸತಿ ನಿಲಯ ಮತ್ತು ಇತರೆ ಅಭಿವೃದ್ಧಿ ಕಾಮಗಾರಿ ಹಾಗೂ ಯಂತ್ರೋಪಕರಣಗಳು)	4421.62	2179.40	384.60	2564.00	ತರಬೇತಿ ಕ್ಯಾಂಪಸ್ (ತರಬೇತಿ, ವರ್ಕ್‌ಶಾಪ್, ಕ್ಯಾಂಟೀನ್, ವಸತಿ ನಿಲಯ ಮತ್ತು ಇತರೆ ಅಭಿವೃದ್ಧಿ ಕಾಮಗಾರಿ)
2	ಹಾವೇರಿ	ತರಬೇತಿ ಕ್ಯಾಂಪಸ್ (ತರಬೇತಿ, ವರ್ಕ್‌ಶಾಪ್, ಕ್ಯಾಂಟೀನ್, ವಸತಿ ನಿಲಯ ಮತ್ತು ಇತರೆ ಅಭಿವೃದ್ಧಿ ಕಾಮಗಾರಿ ಹಾಗೂ ಯಂತ್ರೋಪಕರಣಗಳು)	4421.62	629.00	111.00	740.00	ವರ್ಕ್‌ಶಾಪ್ ಕಟ್ಟಡ ಮತ್ತು ಅಭಿವೃದ್ಧಿ ಕಾಮಗಾರಿ
3	ಮಡಿಕೇರಿ (ಮಾಯಮುಡಿ)	ತರಬೇತಿ ಕ್ಯಾಂಪಸ್ (ತರಬೇತಿ, ವರ್ಕ್‌ಶಾಪ್, ಕ್ಯಾಂಟೀನ್, ವಸತಿ ನಿಲಯ ಮತ್ತು ಇತರ ಅಭಿವೃದ್ಧಿ ಕಾಮಗಾರಿ ಹಾಗೂ ಯಂತ್ರೋಪಕರಣಗಳು)	4421.62	629.00	111.00	740.00	ವರ್ಕ್‌ಶಾಪ್ ಕಟ್ಟಡ ಮತ್ತು ಅಭಿವೃದ್ಧಿ ಕಾಮಗಾರಿ
4	ಗೌರಿಬಿದನೂರು	ಬಾಲಕ & ಬಾಲಕಿಯರ ವಸತಿ ನಿಲಯ	600.00	502.35	88.65	591.00	ಬಾಲಕ & ಬಾಲಕಿಯರ ವಸತಿ ನಿಲಯ
5	ಹುಮ್ನಾಬಾದ್	ಬಾಲಕರ ವಸತಿ ನಿಲಯ	300.00	255.00	45.00	300.00	ಬಾಲಕರ ವಸತಿ ನಿಲಯ
			ಒಟ್ಟು ಮೊತ್ತ	**4194.75**	**740.25**	**4935.00**	

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಕೌಉಜೀಇ 241 ಕೈತಇ 2017 ಬೆಂಗಳೂರು, ದಿನಾಂಕ: 14/09/2018

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 5 ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಉಪ ಕೇಂದ್ರಗಳಾದ ಚಳ್ಳಕೆರೆ, ಹಾವೇರಿ, ಮತ್ತು ಮಡಿಕೇರಿ(ಮಾಯಮುಡಿ) ಗಳಲ್ಲಿ ನೂತನವಾಗಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಹಾಗೂ ಗೌರಿಬಿದನೂರು ಮತ್ತು

ಹುಮ್ನಾಬಾದ್‌ಗಳಲ್ಲಿ ಹಾಲಿ ಲಭ್ಯವಿರುವ ಕೇಂದ್ರಗಳಲ್ಲಿ ಮೂಲಭೂತ ಕೌಶಲ್ಯಾಭಿವೃದ್ಧಿಗಾಗಿ ವಸತಿ ನಿಲಯಗಳ ನಿರ್ಮಾಣದ ಕಟ್ಟಡ ಕಾಮಗಾರಿಗಳನ್ನು ರೂ.4935.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಸದರಿ ಯೋಜನೆಗೆ ಅವಶ್ಯವಿರುವ ಹಣಕಾಸಿನ ಮೂಲಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಕ್ರಸ	ಕೇಂದ್ರ	ಒಟ್ಟು ಯೋಜನಾ ವೆಚ್ಚ	2017-18 ನೇ ಸಾಲಿಗೆ ನಬಾರ್ಡ್‌ನಿಂದ ಒದಗಿಸಲಾಗುವ ಸಾಲದ ಮೊತ್ತ (ಶೇ 85%) (ರೂ. ಲಕ್ಷಗಳಲ್ಲಿ)	ರಾಜ್ಯ ಸರ್ಕಾರದ ಪಾಲು (ಶೇ15%) (ರೂ ಲಕ್ಷಗಳಲ್ಲಿ)	ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ)
1	ಚಳ್ಳಕೆರೆ	4421.62	2179.40	384.60	2564.00
2	ಹಾವೇರಿ	4421.62	629.00	111.00	740.00
3	ಮಡಿಕೇರಿ (ಮಡಿಕೆಬೀಡು)	4421.62	629.00	111.00	740.00
4	ಗೌರಿಬಿದನೂರು	600.00	502.35	88.65	591.00
5	ಹುಮ್ನಾಬಾದ್	300.00	255.00	45.00	300.00
		ಒಟ್ಟು ಮೊತ್ತ	4194.75	740.25	4935.00

ಸದರಿ ವೆಚ್ಚವನ್ನು ಲೆಕ್ಕಶೀರ್ಷಿಕೆ 4851-00-102-0-18-436 ರಡಿಯಲ್ಲಿ ಭರಿಸಲು ಮತ್ತು ಈ ಕೆಳಕಂಡ ಷರತ್ತುಗಳನ್ವಯ ಮಂಜೂರಾತಿ ನೀಡಿದೆ.

- ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಅಧಿನಿಯಮ 1999 ರನ್ವಯ ಕ್ರಮ ವಹಿಸುವುದು.
- ಪಿ.ಎಂ.ಸಿ ಸಂಸ್ಥೆಯಿಂದ ಗುಣಮಟ್ಟ ನಿಯಂತ್ರಣವನ್ನು, 3ನೇ ವ್ಯಕ್ತಿಯ ಪರಿವೀಕ್ಷಣೆ ನಡೆಸುವುದು.
- ಪಿ.ಎಂ.ಸಿ ಸಂಸ್ಥೆಯು 3 ವಾರಗಳಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸುವುದು.
- ಎಲ್ಲಾ ಘಟಕಗಳಿಗೆ ಟೆಂಡರ್‌ನ್ನು ನಾಲ್ಕು ವಾರಗಳಲ್ಲಿ ಕರೆಯುವುದು.
- ಚಳ್ಳಕೆರೆ ತರಬೇತಿ ಸಂಸ್ಥೆಯ ಕಾಮಗಾರಿಗಳನ್ನು ಹಾಗೂ ಯಂತ್ರೋಪಕರಣಗಳ ಖರೀದಿಯನ್ನು ಒಂದು ವರ್ಷದಲ್ಲಿ ಮುಕ್ತಾಯಗೊಳಿಸುವುದು.
- ಹಾವೇರಿ, ಮಡಿಕೇರಿ(ಮಡಿಕೆಬೀಡು) ತರಬೇತಿ ಸಂಸ್ಥೆಯ ಕಾಮಗಾರಿಗಳನ್ನು ಹಾಗೂ ಯಂತ್ರೋಪಕರಣಗಳ ಖರೀದಿಯನ್ನು ಮತ್ತು ಗೌರಿಬಿದನೂರು, ಹುಮ್ನಾಬಾದ್ ವಸತಿ ನಿಲಯ ಕಾಮಗಾರಿಗಳನ್ನು 9 ತಿಂಗಳಲ್ಲಿ ಮುಕ್ತಾಯಗೊಳಿಸುವುದು.

ಈ ಆದೇಶವನ್ನು ಸಚಿವ ಸಂಪುಟದ ಪ್ರಕರಣ ಸಂಖ್ಯೆ:ಸಿ/504/2018, ದಿನಾಂಕ: 06.09.2018 ರಂದು ಸಚಿವ ಸಂಪುಟ ನೀಡಿರುವ ಸಹಮತಿಯಂತೆ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಈರಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

ಅನುಬಂಧ-2

Existing Staff Details of GTTC Challakere

Sl. No.	Designation	Qualification	No. of Staff	Remarks
1	Principal	BE, M.Tech	01	Contract
2	Lecturer	BE, M.Tech (Mech)	04	Guest Faculty
3	Lecturer	BE, M.Tech (E&C)	02	Guest Faculty
4	Instructor	Diploma	04	Guest Faculty
5	Lecturer	M.Sc, B.Ed	01	Guest Faculty
6	Office Assistant	BE	01	Outsource
7	Office Assistant	M.Com	01	Outsource
8	Security & Housekeeping Staff	--	08	Outsource
Total			22	

ANNEXURE- 3

List of Machinery and Equipments installed at GTTC, Challakere centre

1) Laboratory Name: Conventional Machine Shop

Sl.No	Machine Name	Qty
1	Power Hacksaw Machine	1
2	HMT-Praga Precision Surface Grinding	2
3	Material Handling Equipment	1
4	HMT-Praga Precision Cutter and Tool Grinder	1
5	Cylindrical Grinding Machines	2
6	HMT Vertical Milling Machine with DRO M/C	1
7	HMT Vertical Milling Machine	1
8	HMT Universal Milling Machine with DRO	3
9	HMT Universal Milling Machine	4
10	Precision Lathe	7
11	Pillar Grinding Machine	2
12	Bench Grinder RG02	2
13	Pedestral Grinder RG06	2
14	Bench Vise	80

2) Laboratory Name: CNC Lab

Sl. No	Material Description	Qty
1	CNC Turning Machine	1
2	CNC Millling Machine	1
3	CNC Simulator	7
4	Tool Presetter	1

3) **Laboratory Name: Computer Lab and CAD Lab**

Sl. No	Material Description	Qty
1	Workstation Computers (HP India)	30
2	Workstation Computers (HP India)	30
3	SMART BOARD	1
4	LED Projector (CASIO)	1
5	All One Printer (HP-1 & Canon – 1)	1+1

4) **Laboratory Name: Electrical & Electronics Lab**

Sl. No	Material Description	Qty
1	Work Bench: INTELITEK (With accessories and Learning Software)	12
2	Electrical Work Bench: INTELITEK (With accessories)	1
3	Analog Electronics Experimental Kit (with experimental modules)	10
4	Digital IC Trainer Kit	10
5	IC TESTER (Analog & Digital) 2 each	4
6	Passive Decade Boxes (Each 6)	18

5) Laboratory Name: Automation Lab

Sl no	Material Description	Qty
1	Analog Sensor Training Kit	2
2	Digital Sensor Training Kit	2
3	Portable PLC and HMI Training Kit with Software	6
4	Advance PLC Training with Industrial Automation Components-Work Bench with Accessories and Software.	3

6) **Laboratory Name: Advanced Hydraulics and Pneumatics Lab**

Sl. No	Material Description	Qty
1	Advanced Industrial Pneumatics with PLC and Accessories	2
2	Advanced Industrial Hydraulics with PLC and Accessories	2

7) **Laboratory Name: Applied Science Lab**

Sl. No	Material Description	Qty
1	Law of concurrent force apparatus (With 6 set of 50g weight)	2
2	Moment bar (With 4 set of 50g weight)	2
3	Surface tension apparatus	2
4	Viscosity apparatus	2
5	Boyle's law apparatus	2
6	Sonometer (With 2 set of 500g weight)	2
7	Electronic balance	2
8	Resonance air column apparatus	2
9	Turning fork set	2

8) **Laboratory Name: LanguageLab (Supplied by KSDC)**

Sl. No	Material Description	Qty
1	Think Pad (Smart Desk)	30
2	Think Pad (Smart Desk)	1
3	EPSON Projector	1
4	Smart Vision Speaker	2
5	Smart Board (HITE Vision)	1
6	White Board	1

9) **Furniture**

Sl. No	Material Description	Qty
1	Principal/Executive Table	1
2	Principal/Executive Table	1
3	Dual Desk	60

4	Drawing Board with Stand	84
5	Drawing Board without stand	30
6	Office/Instructor Chair (with Arm)	12
7	Computer Chair (without Arm)	50
8	Plastic Chairs	100
9	Chairs For Conference	10
10	Dining Table with Chair	8
11	Computer Table	50
12	Conference Table	1
13	Library Reading Table	8
14	Office/Instructor Table	8
15	Science Lab Table	6
16	Workbench Table	40
17	White Board with Stand	3
18	Ceramic Green Chalk Board	5
19	Library Cupboard with Glass Door	15
20	Pigeon Cupboards	10
21	Office File Cabinnates	8
22	Almirah	8
23	20 KvA Ups 3 Phase Input and Single-Phase Output-TPC	2
24	Battery 42 Ah-Exide	60
25	Public Addressing System (Amplifier 240 Wats -1 No. Wall Speaker 60 Watts-4 No's Cord Mic Hc -Dual Mic With Stand Podium Mic Speaker Cable)	1 SET
26	Fingerprint Reader (Biometric System)	1
27	Water Purification Plants	1

10) Hand Tools

SI.No	Description	Qty
1	Flat file Bastard 12" Make: Escon	75
2	Flat file Second Cut 12" Make: Escon	77
3	Flat file Second Cut 10" Make: Escon	80
4	Flat file Second Cut 8" Make: Escon	37
5	Flat file Smooth 10 " Make: Escon	55
6	Flat file Smooth 8" Make: Escon	66
7	Fiat file rough 12" Make: Escon	10
8	Hand file second cut file 10" Make: Escon	46
9	Square file Bastard 12" Make: Escon	64

10	Square file Second Cut 10" Make: Escon	63
11	Square file Second Cut 8" Make: Escon	20
12	Square file Second Cut 6" Make: Escon	10
13	Square file Smooth 8" Make; Escon	20
14	Square file Smooth 6" Make: Escon	12
15	Square File with safe edge 8" Make: Escon	12
16	Pillar file With Safe Edge 8" Make: Escon	58
17	Pilar file With Safe Edge 6" Make: Escon	58
18	Triangular file Bastard 10" Make: Escon	43
19	Triangular file Second Cut 1O" Make: Escon	46
20	Triangular file Second Cut 8" Make: Escon	29
21	Triangular fie Second Cut 6" Make: Escon	16
22	Triangular file Smooth 8" Make: Escon	30
23	Triangular file Smooth 6" Make: Escon	12
24	Round file Bastard 12" Make: Escon	12
25	Round file Second cut 12" Makes Escon	12
26	Round file Second cut 10" Make: Escon	12
27	Round file Second cut 8" Make: Escon	10
28	Round file Second cut 6" Make: Escon	12
29	Round file Smooth 10" Make: Escon	12
30	Round file Smooth 6" Make: Escon	12
31	Half Round file Bastard 12" Make: Escon	12
32	Half Round file Second cut 12" Make: Escon	12
33	Half Round file Second cut l 0" Make: Escon	12
34	Half Round file Second cut 6" Make ;Escon	12
35	Half Round file Smooth 10" Make Escon	33
36	Half Round file Smooth 6" Make: Escon	12

37	Knife Edge file Second cut 10" Make: Escon	12
38	Knife Edge file Second cut 8" Make: Escon	12
39	Knife Edge file Second cut 6" Make: Escon	22
40	Knife Edge file Smooth 8" Make: Escon	12
41	Knife Edge file Smooth 6" Make: Escon	12
42	Warding file Smooth 6" Make: Escon	12
43	Needle file Make: Escon	20
	Cutting Tools	
44	HSS Dril bit Straight Shank Dia 2 to 12 mm (Step of0.5 mm) Make : Addison	10
45	HSS Dril bit taper Shank Dia 13 to 20 mm (Step of0.5 mm) Make: Addison	4
46	HSS Drill bit Straight Shank for Tapping holes. M4 -MIO Tap size. (dia3.3, 4.2, 5.0.6.8,6.5) Make :Addison	6
47	HSS Tap Set for Size M4 - Ml2 with wrench Make : Addison/samrat	4
48	HSS Die M4 - Ml2 with Die Sock Make: Totem	4
49	HSS Hand Reamer Dia 6-10 mm Make :Addison	4
50	HSS Machine Reamer Dia 6-10mm Make :Addison	4
51	HSS Counter sink bit 1\2-120 degree Make: Starcut	10
52	HSS Counter borebit for Allen Screw Head 1/2 90 Degree Make : Starcut	2
53	HSS Centre drill Dia 2 mm Make: Aadison	20
54	HSS Centre drill Dia 3.0 mm Make : Addison	20
55	HSS Centre drill Dia 6 mm Make :Addison	20
56	HSS Centre drill Dia 8 mm Make :Addison	20
57	Stone Carborandum Size: 25 x 25 x 150 mm Make :Norton	20
58	Oil Stone 25 x 52 x 150 mm Make: Norton	20
59	HSS Tool Bit 1/4" x l/4" x 6" Make : Addison	5
60	HSS Tool Bit 1/2" x 1/2" x 6" Make :Addison	5
61	HSS Round Bit Dia 6mm x 4" Make: Addison	4
62	HSS Round Bit Dia 8mm x4" Make: Addison	4

63	Knurling Tool Straight &Diamond cut Make : Samrat	2
64	Side and face miling cutter dia 100 x 10 X dia 25mm Make: Starcut	4
65	Side and face cutter dia 80 x 10 X bore size dia 27mm Make:Starcut	4
66	Cylindrical milling cutter dia 63 x 70 x bore size dia 27 mm, Make: Starcut	2
67	Slitting Saw cutter dia 75 x 3 X bore size dia 27 mm Make :Eskent	4
68	Slitting Saw cutter dia 100 x 6 X bore size dia 27mm Make :Eskent	4
69	Single angle cutter dia 75 x 16 x bore size dia 27mm Make :Starcut	2
70	Single angle cutter dia 75 x 20 x bore size dia 27mm - 450 Make :Starcut	2
71	Equal angle cutter dia75x 22 x bore size dia 27-900 Make: Addison	2
72	Shell End Mill dia 63x40 x Bore dia 27 mm	2
73	Shell End Mill dia 50x 36 x bore size dia 22 (preferably inserted tip type) Make : Addison	2
74	Parallel shank End mill dia 6 Make :addison	10
75	Parallel shank End milldia 10 Make : addison	10
76	Parallel shank End mill dia 16 double fluted Make : Addison	10
77	Concave Milling cutter dia 80 x 6 radius x bore size dia 27mm Make : Addison	2
78	Convex Milling cutter dia 80 x 6 radius x bore size dia 27 mm Make :Starcut	2
79	Disc type form milling cutter (Involutes form 1.5 & 2 module) Make :Starcut	2
80	Parallel shank HSS End mill dia 5 mm, dia 8mm, and dia 12 mm Make: Addison	8
81	Woodruff key seating cutters A 13.5x3, Al6.5x4 Make : Addison	2

SI.No	Description	Qty
I	HSS Hand Hacksaw Blade I 8TPI	60
2	Hacksaw Frame Fixed 300mm	40
3	Flat Chisel	20
4	Ball peen Hammer 250 gms& 500 gms	10
5	Hammer Cross Peen 0.75 kg with handle	2
6	Tap Wrench Small	10
7	Tap Wrench Big	10
8	File Brushes	10

9	Bench Brushes	20
10	Machine Brushes	5
11	Outside Caliper (Divider) 150	10
12	Inside Caliper (Divider) 150	10
13	Divider spring type -150 mm	2
14	Odd leg caliper firm joint 0- 150 mm	2
15	Try Square 4 Inch Blade	12
16	Try Square 6 Inch Blade	20
17	Adjustable Try square 4"	10
18	Bevel edge Try Square 4"	4
19	Protractor	12
20	Scriber	50
21	Center Punch	32
22	Prick Punch	32
23	Number Punch 5 mm.	4
24	Persian Blue Tube	10

Sl.No	Description	Qty
1	Self Centering Drill Chuck 12 mm Make :ALPS/HUGO	4
2	Drill Chuck with Key 12 mm Make: HUGO	4
3	Sleeves MT 1 Make: HUGO	4
4	Sleeves MT 2 Make: HUGO	4
5	Sleeves MT 3 Make: HUGO	4
6	Revolving Centre Make: HUGO	4
7	Dead Centre. Make: HUGO	8
8	Collet Dia 4 to 12mm Make :ALPS	2
9	V-Block 7 cm with "C "clamp Make: HUGO	2
10	Tool Makers clamp 2"x 5" Make: HUGO	2
11	"C" Clamp 5" Make:HUGO	3
12	"C" Clamp 10" Make: HUGO	3
13	Strap Clamp set Make: HUGO	3
14	Goose neck Clamp set Make: HUGO	3
15	Vernier Height Gauge 0-300 mm Mako: Mitutoyo	1
16	Vernier Caliper 0-150 mm Make :Mitutoyo	10

17	Vernier Caliper 0-200 mm Make :Mituteyo	10
18	Digital Vernier 0-150 mm Make :Mitutoyo	2
19	Dial Vernier 150 (0.02LC) Make :Mitutoyo	4
20	Outside Micrometre 0-25 mm Make :Mitutoyo	6
21	Outside Micrometre 25-50 mm Make :Mitutoyo	6
22	Universal Magnetic Dial Stand Make :Mitutoyo	4
23	Vernier Bevel Protractor Make: Mitutoyo	2
24	Thread Pitch Gauge Metric Make :Mitutoyo	2
25	Thread Pitch Gauge Metric & inches Make :Mitutoyo	2
26	Radius Gauge upto 7mm Make :Mitutoyo	20
27	Radius Gauge from 7.5-15mm Make :Mitutoyo	20
28	Feeler Gauge 0.05 to 1.0 mm Make :Mitutoyo	4
29	Angle Gauge Make :Mitutoyo	12
30	Slip Gauge Box Make :Mitutoyo	1
31	Dia indicator - 0.001mm with Styallus Make :Mitutoyo	3
32	Surface Plate Granite 600 x 600 x 80 mm Make: ES	1

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	146
ಸದಸ್ಯರ ಹೆಸರು	:	ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
ಉತ್ತರಿಸಬೇಕಾದ ದಿನಾಂಕ	:	15.09.2022
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳೆಷ್ಟು; (ವಿವರ ನೀಡುವುದು)</td><td>ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿರುವ ಶಾಲೆಗಳ ವಿವರ ಕೆಳಕಂಡಂತಿದೆ.
<table>
<tr><td>ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ</td><td>688</td></tr>
<tr><td>ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ</td><td>104</td></tr>
</table></td></tr>
<tr><td>ಆ)</td><td>ಅವುಗಳಲ್ಲಿ ಮೂಲಭೂತ ಸೌಕರ್ಯಗಳು ಹಾಗೂ ಸಿಬ್ಬಂದಿ ವರ್ಗಗಳ ಕೊರತೆಯನ್ನು ಗುರುತಿಸಿ ಕೈಗೊಂಡ ಕ್ರಮಗಳೇನು;</td><td>ಶಿಕ್ಷಕರ ಕೊರತೆಯನ್ನು ನೀಗಿಸಲು ಈ ಕೆಳಕಂಡಂತೆ ಕ್ರಮವಹಿಸಲಾಗಿದೆ.
ಮಕ್ಕಳ ಶೈಕ್ಷಣಿಕ ಪಾಠ ಪ್ರವಚನಗಳಿಗೆ ತೊಂದರೆಯಾಗದ ರೀತಿಯಲ್ಲಿ ಅಗತ್ಯವಿರುವ ಶಾಲೆಗಳಿಗೆ ಬೆಂಗಳೂರು ದಕ್ಷಿಣ ಹಾಗೂ ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆಗಳಿಗೆ ಈ ಕೆಳಕಂಡಂತೆ ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ.
<table>
<tr><th></th><th>ಪ್ರಾಥಮಿಕ</th><th>ಪ್ರೌಢ</th></tr>
<tr><td>ಬೆಂಗಳೂರು ದಕ್ಷಿಣ</td><td>288</td><td>51</td></tr>
<tr><td>ಬೆಂಗಳೂರು ಉತ್ತರ</td><td>120</td><td>18</td></tr>
<tr><td>ಒಟ್ಟು</td><td>408</td><td>69</td></tr>
</table>
ಅಲ್ಲದೇ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಹುದ್ದೆಗಳಿಗೆ ಎದುರಾಗಿ ಪ್ರಸಕ್ತ ಸಾಲಿನಲ್ಲಿ ಮಕ್ಕಳ ಮತ್ತು ಶಿಕ್ಷಕರ ಅನುಪಾತ(ಪಿ.ಟಿ.ಆರ್) ಕ್ಕೆ ಅನುಗುಣವಾಗಿ ಹುದ್ದೆಗಳ ಮರುಹೊಂದಾಣಿಕೆ (Rationalisation) ಪ್ರಕ್ರಿಯೆ ನಿರ್ವಹಿಸುತ್ತಿರುವುದರಿಂದ ಹುದ್ದೆಗಳ ಹೊಂದಾಣಿಕೆ ಆಗುತ್ತದೆ.
ಸಿಬ್ಬಂದಿ ವರ್ಗ :
ಸಿಬ್ಬಂದಿ ವರ್ಗಗಳ ಕೊರತೆಯನ್ನು ಗುರುತಿಸಿಕೊಂಡು ಬೋಧಕೇತರ ವೃಂದದ ನೌಕರರುಗಳ ಖಾಲಿ ಹುದ್ದೆಗೆ</td></tr>
</table>

<table>
<tr>
<td></td>
<td></td>
<td>ಅನುಗುಣವಾಗಿ ಅನುಕಂಪದ ಆಧಾರದ ನೇಮಕಾತಿ ಹಾಗೂ ಮುಂಬಡ್ತಿ ವರ್ಗಾವಣೆ ಮೂಲಕ ಸಿಬ್ಬಂದಿಗಳ ಕೊರತೆಯನ್ನು ಬಗೆಹರಿಸಲು ಕ್ರಮವಹಿಸಲಾಗುತ್ತಿದೆ.

<u>ಮೂಲಭೂತ ಸೌಕರ್ಯಗಳು:</u>
ಬೆಂಗಳೂರು ನಗರ ವ್ಯಾಪ್ತಿಯ ಒಟ್ಟು 688 ಸರ್ಕಾರಿ ಪ್ರಾಥಮಿಕ ಶಾಲೆಗಳಿದ್ದು, ಒಟ್ಟು 104 ಪ್ರೌಢ ಶಾಲೆಗಳಿರುತ್ತವೆ. ಸದರಿ ಶಾಲೆಗಳಲ್ಲಿ ಈ ಕೆಳಕಂಡಂತೆ ಮೂಲಭೂತ ಸೌಲಭ್ಯಗಳಿರುತ್ತದೆ.
<table>
<tr><th></th><th>ಪ್ರಾಥಮಿಕ</th><th>ಪ್ರೌಢ</th></tr>
<tr><td>ವಿದ್ಯುತ್ ವ್ಯವಸ್ಥೆ</td><td>678</td><td>102</td></tr>
<tr><td>ಶೌಚಾಲಯ ವ್ಯವಸ್ಥೆ</td><td>682</td><td>102</td></tr>
<tr><td>ಕುಡಿಯುವ ನೀರಿನ ವ್ಯವಸ್ಥೆ</td><td>677</td><td>100</td></tr>
<tr><td>ಉತ್ತಮ ಕಾಂಪೌಂಡ್ ವ್ಯವಸ್ಥೆ</td><td>618</td><td>98</td></tr>
</table>
(ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಹಾಗೂ ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ)
ಮುಂದುವರೆದು 2022-23ನೇ ಸಾಲಿನ ಆಯವ್ಯಯ ಘೋಷಣೆಯಂತೆ ಸರ್ಕಾರದ ಆದೇಶ ಸಂಖ್ಯೆ: ಇಪಿ 11 ಯೋಸಕ 2022, ಬೆಂಗಳೂರು,ದಿನಾಂಕ:19.08.2022ರ ಮೂಲಕ ಬೆಂಗಳೂರಿನ ಆಯ್ದ 20 ಶಾಲೆಗಳನ್ನು ರೂ.89.24ಕೋಟಿ ವೆಚ್ಚದಲ್ಲಿ ಬೆಂಗಳೂರು ಪಬ್ಲಿಕ್ ಶಾಲೆ'ಗಳಾಗಿ ಅಭಿವೃದ್ಧಿಪಡಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ (ಆದೇಶ ಪ್ರತಿಯನ್ನು ಅನುಬಂಧ-3ರಲ್ಲಿ ಒದಗಿಸಿದೆ)</td>
</tr>
<tr>
<td>ಇ)</td>
<td>ಶಿಕ್ಷಕರ ಕೊರತೆಯನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು</td>
<td><u>ಪ್ರಾಥಮಿಕ:</u>
ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿಇರುವ ಒಟ್ಟು 15000 ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8 ನೇ ತರಗತಿ) ಹುದ್ದೆಗಳಿಗಾಗಿ ದಿನಾಂಕ 21.03.2022ರಂದು ಅಧಿಸೂಚಿಸಲಾಗಿದ್ದು ಹಾಗೂ 21.05.2022 ರಂದು 22.05.2022 ರಂದು</td>
</tr>
</table>

		ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ **ಪ್ರೌಢ:** ಸರ್ಕಾರದ ಆದೇಶ ಸಂಖ್ಯೆ: ಇಪಿ 14 ಎಲ್ ಬಿ ಪಿ 2022 ದಿನಾಂಕ:03/09/2022 ರ ಅದೇಶದಲ್ಲಿ ವಿವಿಧ ವೃಂದಗಳ ಒಟ್ಟು 2500 ಶಿಕ್ಷಕರುಗಳ ಹುದ್ದೆಗಳನ್ನು ಅನುಮತಿ ನೀಡಿರುವ 15000 ಜಿಪಿಎಸ್‌ಟಿ ನೇಮಕಾತಿಯಲ್ಲಿ ಭರ್ತಿಯಾಗದೇ ಖಾಲಿ ಉಳಿದ ಹುದ್ದೆಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟು ದೈಹಿಕ ಶಿಕ್ಷಕರ ಖಾಲಿ ಇರುವ 200 ಹುದ್ದೆಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲು ಆದೇಶಿಸಿದೆ.
ಈ)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಶಾಸಕರುಗಳ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಶಾಲೆಗಳ ನೂತನ ಕೊಠಡಿಗಳ ನಿರ್ಮಾಣಕ್ಕಾಗಿ ಅನುದಾನವನ್ನು ಮಂಜೂರು ಮಾಡಲಾಗಿದೆಯೇ; ಹೌದಾದಲ್ಲಿ, ಆ ಕುರಿತು ವಿವರಗಳನ್ನು ನೀಡುವುದು?	ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ವಿವರಗಳನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ) ಮುಂದುವರೆದು 2022-23ನೇ ಸಾಲಿನ ಆಯವ್ಯಯ ಘೋಷಣೆಯಂತೆ ಸರ್ಕಾರದ ಆದೇಶ ಸಂಖ್ಯೆ: ಇಪಿ 11 ಯೋಸಕ 2022, ಬೆಂಗಳೂರು, ದಿನಾಂಕ:19.08.2022ರ ಮೂಲಕ ಬೆಂಗಳೂರಿನ ಆಯ್ದ 20 ಶಾಲೆಗಳನ್ನು ರೂ.89.24ಕೋಟಿ ವೆಚ್ಚದಲ್ಲಿ ಬೆಂಗಳೂರು ಪಬ್ಲಿಕ್ ಶಾಲೆ'ಗಳಾಗಿ ಅಭಿವೃದ್ಧಿಪಡಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ (ಆದೇಶ ಪ್ರತಿಯನ್ನು **ಅನುಬಂಧ-3**ರಲ್ಲಿ ಒದಗಿಸಿದೆ)

ಇಪಿ: 274 ಯೋಸಕ 2022

(ಬಿ.ಸಿ.ನಾಗೇಶ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

LAQ - 146

ಅನುಬಂಧ - 01

District name	Block name	School Category	Total Number of Schools	Minor Repair Rooms	Major Repair Rooms	Electricity Facility	Toilet Facility	Drinking Water Facility	Boundary Wall Facility
BENGALURU U NORTH	NORTH1	Primary	65	42	8	62	64	64	57
BENGALURU U NORTH	NORTH2	Primary	51	18	25	50	49	48	40
BENGALURU U NORTH	NORTH3	Primary	74	33	43	72	72	72	64
BENGALURU U NORTH	NORTH4	Primary	45	21	13	45	45	45	43
BENGALURU U SOUTH	ANEKAL	Primary	35	6	2	35	35	33	33
BENGALURU U SOUTH	SOUTH1	Primary	75	23	23	75	75	74	69
BENGALURU U SOUTH	SOUTH2	Primary	70	44	29	70	70	70	61
BENGALURU U SOUTH	SOUTH3	Primary	117	79	47	115	117	116	107
BENGALURU U SOUTH	SOUTH4	Primary	156	60	66	154	155	155	144
Total			**688**	**326**	**256**	**678**	**682**	**677**	**618**

District name	Block name	School category	Total Number of Schools	Minor Repair Rooms	Major Repair Rooms	Electricity Facility	Toilet Facility	Drinking Water Facility	Boundary Wall Facility
BENGALURU U NORTH	NORTH1	secondary	15	9	18	13	13	12	12
BENGALURU U NORTH	NORTH2	secondary	11	10	11	11	11	11	11
BENGALURU U NORTH	NORTH3	secondary	8	11	7	8	8	8	7
BENGALURU U NORTH	NORTH4	secondary	5	5	2	5	5	5	5
BENGALURU U SOUTH	ANEKAL	secondary	5	0	0	5	5	5	5
BENGALURU U SOUTH	SOUTH1	secondary	10	18	0	10	10	10	10
BENGALURU U SOUTH	SOUTH2	secondary	15	15	17	15	15	15	13
BENGALURU U SOUTH	SOUTH3	secondary	18	9	8	18	18	18	18
BENGALURU U SOUTH	SOUTH4	secondary	17	3	14	17	17	16	17
Total			**104**	**80**	**77**	**102**	**102**	**100**	**98**

LAQ-146

ಅನುಬಂಧ - 02

- **2019-20 ರಿಂದ 2022-23 ರ ಸಾಲಿನವರೆಗೆ ರಾಜ್ಯ ಮುಂದುವರಿದ ಕಾರ್ಯಕ್ರಮಗಳಡಿಯಲ್ಲಿ ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲೆಗಳ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸರ್ಕಾರಿ ಪ್ರಾಥಮಿಕ ಶಾಲೆಗಳ ಕೊಠಡಿ ನಿರ್ಮಾಣ ಹಾಗೂ ದುರಸ್ಥಿಗೆ ಅನುದಾನ ಬಿಡುಗಡೆ ಮಾಡಿರುವ ವಿವರ ಈ ಕೆಳಕಂಡಂತಿದೆ:**

ಪ್ರಾಥಮಿಕ ಶಾಲೆ		
ನಿರ್ಮಾಣ		
ಕ್ರ.ಸಂ	ವರ್ಷ	ಅನುದಾನ(ಲಕ್ಷಗಳಲ್ಲಿ)
1	2019-20	392.20
2	2020-21	233.20
3	2021-22	ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.
4	2022-23	22-23ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ 28 ವಿಧಾನ ಸಭಾ ಕ್ಷೇತ್ರಗಳಿಗೆ 420 ಕೊಠಡಿಗಳು ಮಂಜೂರಾಗಿರುತ್ತವೆ. ಆದರೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.
ಪ್ರಾಥಮಿಕ ಶಾಲೆ		
ದುರಸ್ಥಿ		
ಕ್ರ.ಸಂ	ವರ್ಷ	ಅನುದಾನ(ಲಕ್ಷಗಳಲ್ಲಿ)
1	2019-20	32.574
2	2020-21	11.71
3	2021-22	ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.
4	2022-23	ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

* **2019–20 ರಿಂದ 2022–23 ರ ಸಾಲಿನವರೆಗೆ ರಾಜ್ಯ ಮುಂದುವರಿದ ಕಾರ್ಯಕ್ರಮಗಳಡಿಯಲ್ಲಿ ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲೆಗಳ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸರ್ಕಾರಿ ಪ್ರೌಢ ಶಾಲೆಗಳ ಕೊಠಡಿ ನಿರ್ಮಾಣ ಹಾಗೂ ದುರಸ್ಥಿಗೆ ಅನುದಾನ ಬಿಡುಗಡೆ ಮಾಡಿರುವ ವಿವರ ಈ ಕೆಳಕಂಡಂತಿದೆ:**

ಪ್ರೌಢ ಶಾಲೆ		
ನಿರ್ಮಾಣ		
ಕ್ರ.ಸಂ	ವರ್ಷ	ಅನುದಾನ(ಲಕ್ಷಗಳಲ್ಲಿ)
1	2019–20	367.00
2	2020–21	126.00
3	2021–22	ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.
4	2022–23	22–23ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ 28 ವಿಧಾನ ಸಭಾ ಕ್ಷೇತ್ರಗಳಿಗೆ 140 ಕೊಠಡಿಗಳು ಮಂಜೂರಾಗಿರುತ್ತವೆ ಆದರೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.
ಪ್ರೌಢ ಶಾಲೆ		
ದುರಸ್ಥಿ		
ಕ್ರ.ಸಂ	ವರ್ಷ	ಅನುದಾನ(ಲಕ್ಷಗಳಲ್ಲಿ)
1	2019–20	97.047
2	2020–21	157.50
3	2021–22	ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.
4	2022–23	ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಅನುಬಂಧ-3 LAQ-146

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2022-23ನೇ ಸಾಲಿನ ಆಯವ್ಯಯ ಘೋಷಿತ ಕಂಡಿಕೆ:106ರ ಕಾರ್ಯಕ್ರಮ ಬೆಂಗಳೂರಿನ ಆಯ್ದ 20 ಶಾಲೆಗಳನ್ನು 'ಬೆಂಗಳೂರು ಪಬ್ಲಿಕ್ ಶಾಲೆ'ಗಳಾಗಿ ಅಭಿವೃದ್ಧಿಪಡಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : 1) 2022-2023ನೇ ಸಾಲಿನ ಆಯವ್ಯಯ ಘೋಷಿತ ಕಂಡಿಕೆ: 308

2) ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಯೋ8/ಜ್ಞಾಪೀಪ್ರ/ನಿರ್ಮಾಣ/01/2021-22 ದಿ:06.07.2022

******

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ(1)ರಲ್ಲಿ 2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಘೋಷಿಸಿರುತ್ತಾರೆ.

"ನಮ್ಮ ಸರ್ಕಾರವು ಬೆಂಗಳೂರಿನ ಆಯ್ದ ಸರ್ಕಾರಿ ಸರ್ಕಾರಿ ಶಾಲೆಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯ ಹಾಗೂ ಗುಣಮಟ್ಟದ ಶಿಕ್ಷಣ ಒದಗಿಸಲು ಸವಿವರವಾದ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆ ಅಡಿಯಲ್ಲಿ 89 ಕೋಟಿ ರೂ.ಗಳ ವೆಚ್ಚದಲ್ಲಿ ಬೆಂಗಳೂರಿನ ಆಯ್ದ 20 ಶಾಲೆಗಳನ್ನು ಬೆಂಗಳೂರು ಪಬ್ಲಿಕ್ ಶಾಲೆ ಗಳಾಗಿ ಅಭಿವೃದ್ಧಿಪಡಿಸಲಾಗುವುದು".

ಮೇಲೆ ಓದಲಾದ ಕ್ರಮಾಂಕ(2)ರ ಪ್ರಸ್ತಾವನೆಯಲ್ಲಿ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರು, 2022-23ನೇ ಸಾಲಿನ ಆಯವ್ಯಯ ಘೋಷಿತ ಕಂಡಿಕೆ:308ರಲ್ಲಿ ಬೆಂಗಳೂರಿನ ಆಯ್ದ ಬಿ.ಬಿ.ಎಂ.ಪಿ ವತಿಯಿಂದ ನಡೆಸಲ್ಪಡುತ್ತಿರುವ 04 ಶಾಲೆಗಳನ್ನೊಳಗೊಂಡಂತೆ 20 ಶಾಲೆಗಳಿಗೆ ಅಗತ್ಯ ಮೂಲಭೂತ ಸೌಕರ್ಯ ಹಾಗೂ ಗುಣಮಟ್ಟದ ಶಿಕ್ಷಣ ಒದಗಿಸಿ ಬೆಂಗಳೂರು ಪಬ್ಲಿಕ್ ಶಾಲೆಗಳಾಗಿ ಅಭಿವೃದ್ಧಿಪಡಿಸಲು ಘೋಷಿಸಲಾಗಿದೆ.

ಸದರಿ 20 ಶಾಲೆಗಳ ಪೈಕಿ 02 ಬಿಬಿಎಂಪಿ ಶಾಲೆಗಳನ್ನು ಸ್ಮಾರ್ಟ್ ಸಿಟಿ ಯೋಜನೆಯಡಿ ಹಾಗೂ 2 ಬಿಬಿಎಂಪಿ ಶಾಲೆಗಳನ್ನು ನಗರೋತ್ಥಾನ ಯೋಜನೆಯಡಿ ಕೈಗೆತ್ತಿಗೊಳ್ಳಲಾಗಿದೆ. ಉಳಿದಂತೆ ಬೆಂಗಳೂರು ನಗರದ ಆಯ್ದ 16 ಸರ್ಕಾರಿ ಶಾಲೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಬೆಂಗಳೂರು ಉತ್ತರ ಮತ್ತು ದಕ್ಷಿಣ ಶೈಕ್ಷಣಿಕ ಜಿಲ್ಲೆಗಳ ವ್ಯಾಪ್ತಿಯಲ್ಲಿ ನಡೆಸಲ್ಪಡುತ್ತಿರುವ ಆಯ್ದ ಸರ್ಕಾರಿ ಶಾಲೆಗಳಲ್ಲಿ ಭವಿಷ್ಯದಲ್ಲಿ ದಾಖಲಾತಿ ಹೆಚ್ಚಾಗುವ ಸಂಭವವಿರುವ, ಸ್ಥಳೀಯವಾಗಿ ಅನೇಕ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಅವಕಾಶವಿರುವ ಹದಿನಾರು ಸರ್ಕಾರಿ ಶಾಲೆಗಳನ್ನು ಆಯ್ಕೆ ಮಾಡಿಕೊಂಡು, ಸದರಿ ಶಾಲೆಗಳ

ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಹಾಗೂ ಇತರೆ ಸೌಲಭ್ಯಗಳನ್ನು ಕಲ್ಪಿಸಲು ಒಟ್ಟು ರೂ.75.74 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ

ಸರ್ಕಾರದ ಆದೇಶ ಸಂಖ್ಯೆ: ಇಪಿ 11 ಯೋಸಕ 2022, ಬೆಂಗಳೂರು,ದಿನಾಂಕ:19.08.2022

2022–2023ನೇ ಸಾಲಿನ ಆಯವ್ಯಯ ಘೋಷಿತ ಕಂಡಿಕೆ:308ರ ಕಾರ್ಯಕ್ರಮ ಘೋಷಣೆಯಂತೆ ಅನುಬಂಧದಲ್ಲಿನ ಬೆಂಗಳೂರಿನ ಆಯ್ದ 20 ಶಾಲೆಗಳನ್ನು ರೂ.89.24ಕೋಟಿ ವೆಚ್ಚದಲ್ಲಿ ಬೆಂಗಳೂರು ಪಬ್ಲಿಕ್ ಶಾಲೆ'ಗಳಾಗಿ ಅಭಿವೃದ್ಧಿಪಡಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಸದರಿ 20 ಶಾಲೆಗಳ ಪೈಕಿ 02 ಬಿಬಿಎಂಪಿ ಶಾಲೆಗಳನ್ನು ಸ್ಮಾರ್ಟ್ ಸಿಟಿ ಯೋಜನೆಯಡಿ ಹಾಗೂ 2 ಬಿಬಿಎಂಪಿ ಶಾಲೆಗಳನ್ನು ನಗರೋತ್ಥಾನ ಯೋಜನೆಯಡಿ ಅಭಿವೃದ್ಧಿಪಡಿಸಲು ಅಗತ್ಯಕ್ರಮವಹಿಸತಕ್ಕದ್ದು. ಉಳಿದಂತೆ ಬೆಂಗಳೂರು ನಗರದ ಆಯ್ದ 16 ಸರ್ಕಾರಿ ಶಾಲೆಗಳನ್ನು ಅನುಬಂಧದ ಕ್ರಿಯಾಯೋಜನೆಯಲ್ಲಿರುವಂತೆ ರೂ.75.74 ಕೋಟಿಗಳ ವೆಚ್ಚದಲ್ಲಿ ಸಮಗ್ರವಾಗಿ ಅಭಿವೃದ್ಧಿಪಡಿಸಲು ಕ್ರಮವಹಿಸತಕ್ಕದ್ದು.

ಸದರಿ ಉದ್ದೇಶಕ್ಕಾಗಿ 2022–23ನೇ ಸಾಲಿನ ಆಯವ್ಯಯದ ಪ್ರೌಢ ಶಾಲೆಗಳಿಗೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳು – ಲೆಕ್ಕ ಶೀರ್ಷಿಕೆ:4202–01–202–1–05–386(ನಿರ್ಮಾಣ)ರಡಿಯಲ್ಲಿ ಪೂರಕ ಅಂದಾಜಿನಲ್ಲಿ ಒದಗಿಸಲಾಗುವ ರೂ.30.00ಕೋಟಿ ಅನುದಾನದಿಂದ ಭರಿಸತಕ್ಕದ್ದು. ಉಳಿಕೆ ಅನುದಾನಕ್ಕೆ ಪ್ರಗತಿಗನುಗುಣವಾಗಿ ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸತಕ್ಕದ್ದು.

ಬಿಡುಗಡೆಯಾದ ಅನುದಾನಕ್ಕೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಸೂಕ್ತ ಲೆಕ್ಕ ಪತ್ರಗಳನ್ನು ಇಡತಕ್ಕದ್ದು.

ಸದರಿ ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಗಳ ವಿವರಗಳನ್ನು ತ್ರೈಮಾಸಿಕವಾರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಹಾಗೂ ಸದರಿ ಕಾಮಗಾರಿಗಳನ್ನು ಕಾಲಮಿತಿ ಯೋಜನೆಯಾಗಿ ನಿರ್ವಹಿಸತಕ್ಕದ್ದು.

ಕಾಮಗಾರಿಗಳನ್ನು ಉತ್ತಮ ಗುಣಮಟ್ಟವಾಗಿ ನಿರ್ವಹಿಸುವ ಸಂಸ್ಥೆಗಳಾದ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ/ಲೋಕೋಪಯೋಗಿ ಇಲಾಖೆ ಸಂಸ್ಥೆಯಿಂದ ನಿಯಮಾನುಸಾರ ನಿರ್ವಹಿಸತಕ್ಕದ್ದು.

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪ್ರಚಲಿತ ಎಲ್ಲಾ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ–1999 ಹಾಗೂ ಅದರಡಿಯಲ್ಲಿ ಹೊರಡಿಸಲಾದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಭರಿಸಲಾದ ವೆಚ್ಚದ ವಿವರಗಳನ್ನು

ಕಡ್ಡಾಯವಾಗಿ ಹೊಸ ಡಿಜಿಟಲ್ ಸಪೋರ್ಟ್ ಸಿಸ್ಟಂ (ಅವಲೋಕನ) ತಂತ್ರಾಂಶದಲ್ಲಿ ಇಂದೀಕರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 300 ವೆಚ್ಚ-8/2022, ದಿನಾಂಕ:08.08.2022ರ ಸಹಮತದನ್ವಯ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್.ಡಿ 01 ಟಿ.ಎಫ್.ಪಿ 2022 ದಿನಾಂಕ:04.04.2022ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಹೆಚ್.ಗಿರಿಜಾ) 19/8/22
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಜನೆ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಇವರಿಗೆ;

1. ಮಹಾಲೇಖಪಾಲರು, (ಆಡಿಟ್ 1 & 2) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಖಜಾನಾ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು.
4. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಉಪನಿರ್ದೇಶಕರು, ಖಜಾನಾ ಗಣಕ ಕೇಂದ್ರ, ನಂ.49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
6. ಸರ್ಕಾರದ ಉಪಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
7. ಕೋ ಆರ್ಡಿನೇಟರ್, ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ, ಬೆಂಗಳೂರು.
8. ಸಾಪ್ತಾಹಿಕ ರಾಜ್ಯ ಪತ್ರ/ಶಾಖಾರಕ್ಷ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ.

1. ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು
3. ಆಂತರಿಕ ಆರ್ಥಿಕ ಸಲಹೆಗಾರರ ಆಪ್ತ ಸಹಾಯಕರು, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

4325879/2022/EP-Planning Sec

I/301286/2022

ಸರ್ಕಾರದ ಆದೇಶ ಸಂಖ್ಯೆ: ಇಪಿ 11 ಯೋಸಕ 2022, ಬೆಂಗಳೂರು,ದಿನಾಂಕ:19.08.2022ಕ್ಕೆ ಅನುಬಂಧ

(Rs. In Lakhs)

Sl No	Name of the Schools	U Dise Number	Total number of Students	Total Civil Works amount	Amount For other facilities	Per Child Expenditure	Total amount	Total amount
1	BBMP GHS PADARAYANAPURA	29200801933	446	280	20	0.67	300	800.00 (SMART CITY FUND
2	BBMP GHS CLEVELAND TOWN PULIKESHINAGARA	29280602130	609	455	45	0.82	500	
3	BBMP HS VIJAYANAGARA	29200802533	229	135	15	0.66	150	550.00 (NAGAROTHANA FUND)
4	BBMP GHS MATHIKERE	29280603110	281	378	22	1.42	400	
5	GMPS Boys Attibele Anekal	29200417901	558	422	78	0.9	500	7574.25 (STATE CAPITAL FUND)
6	GHS Hebbagodi Anekal	29200433702	1242	215.8	88	0.24	303.8	
7	Govt Urdu High School DJ Halli	29280603504	1590	269.5	130.5	0.25	400	
8	GHS Cleveland Town, Pulakeshinagar	29280602104	483	316.5	138	0.94	454.5	
9	GHS Thanisandra	29200319929	1828	212.3	174	0.21	386.3	
10	KPS Jeevanabhimanagara	29200312168	1184	330.4	87.8	0.35	418.2	
11	GHS Gunjuru	29200301948	1590	221.7	217.6	0.28	439.3	

12	KPS Hegganahalli	29280208619	1901	417.87	527.13	0.5	945	
13	KPS Kodigehalli	29280710012	1038	312.88	187.12	0.48	500	
14	GHS Agraharalayout Yellahanka	29280704810	891	394.52	105.48	0.56	500	
15	GOVT Composite HS T.Dasarahalli	29280707226	1563	145	421.4	0.36	566.4	
16	GKMPS and RMSA High School Yelahanka Upanagar	29280700124	1148	571	269.59	0.73	840.59	
17	GHPS Gokula	29280503115	501	205.56	127.58	0.66	333.14	
18	GMPS & GHS Doddagollarahatti	29200123930	956	135.48	146.54	0.3	282.02	
19	K.S.G.M.P.S and G.H.S.RMSA Ullalu Upanagara	29280231801	458	184.99	210.01	0.86	395	
20	GMPS & GHS Puttenahalli	29200908205	1197	91.5	218.5	0.26	310	
	Total		**18128**	**4447**	**3127.25**	**7.88**	**8924.25**	

(B.H.GIRIJA) 19/9/22
Special Officer and Ex-officio Under Secretary
Department of School Education and Literacy (Planning)

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)
2)	ಮಾನ್ಯ ಸದಸ್ಯರ ಹೆಸರು	**148**
3)	ಉತ್ತರಿಸಬೇಕಾದ ದಿನಾಂಕ	**15-09-2022**
4)	ಉತ್ತರಿಸುವವರು	ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಪ್ರಶ್ನೆ	ಉತ್ತರ
(ಅ) ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಯವರು ಗ್ರಾಮಾಂತರ, ನಗರ ಪಟ್ಟಣ ಹಾಗೂ ಮಹಾನಗರ ಪ್ರದೇಶಗಳಲ್ಲಿನ ಬಡ ಮತ್ತು ಮಧ್ಯಮ ವರ್ಗದ ಕಾರ್ಮಿಕರಿಗೆ ಹಾಗೂ ಅಪೇಕ್ಷಿತ ಫಲಾನುಭವಿಗಳಿಗೆ ತರಬೇತಿ ಮತ್ತು ಮಾರ್ಗದರ್ಶನ ಹಾಗೂ ನೆರವು ನೀಡಕೆಯ ಕಾರ್ಯಕ್ರಮದಡಿಯಲ್ಲಿ ಕೈಗೊಂಡ ಕ್ರಮಗಳೇನು;	**<u>ಕೌಶಲ್ಯ ಮಿಷನ್</u>** ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಆಸಕ್ತ ಉದ್ಯೋಗದಾತರು ಹಾಗೂ ಉದ್ಯೋಗಾಂಕ್ಷಿಗಳನ್ನು ಒಂದೇ ವೇದಿಕೆಯಡಿ ತರಲು Skill Connect (ಕೌಶಲ್ಯ ಸಂಪರ್ಕ) ಪೋರ್ಟಲ್ ಅನ್ನು ಸೃಷ್ಟಿಸಿದ್ದು,. ರಾಜ್ಯದ ಯುವಕ-ಯುವತಿಯರಿಗೆ ಒಂದೇ ಸೂರಿನಡಿ ಉದ್ಯೋಗಾವಕಾಶ, ಕೌಶಲ್ಯ ತರಬೇತಿ ಮತ್ತು ಉದ್ಯಮಶೀಲತೆಯ ತರಬೇತಿ ನೀಡಲು ರಾಮನಗರ ಜಿಲ್ಲೆಯಲ್ಲಿ ಪೈಲಟ್ ಆಧಾರದ ಮೇರೆಗೆ ಸ್ಕಿಲ್ ಹಬ್ (Skill Hub) ಈಗಾಗಲೇ ಸ್ಥಾಪಿಸಲಾಗಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ಸ್ಕಿಲ್ ಹಬ್ ಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ಅದರಂತೆ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ Skill on Wheels ಯೋಜನೆಯನ್ನು ಪೈಲಟ್ ಆಧಾರದ ಮೇರೆಗೆ ಪ್ರಾರಂಭಿಸಲಾಗುತ್ತಿದ್ದು, ಗ್ರಾಮೀಣ ಭಾಗದ ಅಂಗವಿಕಲರು ಹಾಗೂ ಮಹಿಳೆಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಕೌಶಲ್ಯಾಧಾರಿತ ತರಬೇತಿಯನ್ನು ಅವರಿರುವ ಸ್ಥಳಕ್ಕೆ ತೆರಳಿ ತರಬೇತಿ ನೀಡುವ ಒಂದು ವಿನೂತನ ಯೋಜನೆಯಾಗಿದೆ. **<u>ಡೇ-ನಲ್ಮ್</u>** ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಯಡಿಯ ಡೇ-ಎನ್‌ಯುಎಲ್‌ಎಂ ಅಭಿಯಾನದ ಮುಖ್ಯ ಫಲಾನುಭವಿಗಳು, ನಗರದ ಬಡವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ವಿಕಲಾಂಗರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಈ ಅಭಿಯಾನದ ಮುಖ್ಯ ಫಲಾನುಭವಿಗಳಾಗಿರುತ್ತಾರೆ. ಸದರಿ ರವರಿಗೆ ಡೇ-ಎನ್‌ಯುಎಲ್‌ಎಂ ಅಭಿಯಾನದ ಈ ಕೆಳಕಂಡ ಉಪಘಟಕವಾರು ನೆರವು ನೀಡಿಕೆಯ ಕ್ರಮಕೈಗೊಳ್ಳಲಾಗಿದೆ. 1) ಸ್ವಯಂ ಉದ್ಯೋಗ ಕಾರ್ಯಕ್ರಮ: ಸದರಿ ಉಪಘಟಕದಡಿ ವೈಯಕ್ತಿಕ ಕಿರು ಉದ್ದಿಮೆ, ಗುಂಪು ಕಿರು ಉದ್ದಿಮೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ಗೆ ಸಂಬಂಧಿಸಿದಂತೆ ಕ್ರಮವಾಗಿ ಬ್ಯಾಂಕಿನಿಂದ ರೂ.2.00, ರೂ.10.00 ಲಕ್ಷ ಮತ್ತು ರೂ.1.00 ಲಕ್ಷವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು ಹಾಗೂ ಸ್ವ-ಸಹಾಯ ಸಂಘಗಳು ನಿಯಮಿತವಾಗಿ ಸಾಲವನ್ನು ಮರು ಪಾವತಿಸಿದರೆ ಶೇ.3 ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ ನೀಡಲಾಗುವುದು ಹಾಗೂ ಉದ್ಯಮಶೀಲತಾ ತರಬೇತಿಯನ್ನು ನೀಡಲಾಗುವುದು. **ಸದರಿ ಉಪಘಟಕದಡಿ 2020-21 & 2021-22ನೇ ಸಾಲಿನಲ್ಲಿ ಒದಗಿಸಲಾದ ಸೌಲಭ್ಯದ ವಿವರ ಈ ಕೆಳಕಂಡಂತಿರುತ್ತದೆ.** • 2020-21ನೇ ಸಾಲಿನಲ್ಲಿ ವೈಯಕ್ತಿಕ ಕಿರು ಉದ್ದಿಮೆಯಡಿ 469 ಫಲಾನುಭವಿಗಳಿಗೆ, ಗುಂಪು ಕಿರು ಉದ್ದಿಮೆಯಡಿ 36 ಗುಂಪುಗಳಿಗೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ನಡಿ 204 ಗುಂಪುಗಳಿಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.

	• 2021-22ನೇ ಸಾಲಿನಲ್ಲಿ ವೈಯಕ್ತಿಕ ಕಿರು ಉದ್ದಿಮೆಯಡಿ 1382 ಫಲಾನುಭವಿಗಳಿಗೆ ಗುಂಪು ಕಿರು ಉದ್ದಿಮೆಯಡಿ 150 ಗುಂಪುಗಳಿಗೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ನಡಿ 626 ಗುಂಪುಗಳಿಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. 2) **ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ:** ಸದರಿ ಉಪಘಟಕದಡಿ ನಗರದ ನಿರುದ್ಯೋಗ ಯುವಕ / ಯುವತಿಯರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಿ, ಪ್ರಮಾಣೀಕರಣ ಮತ್ತು ಮೌಲ್ಯಮಾಪನವನ್ನು ಕೈಗೊಂಡು, ಕೇಂದ್ರ ಸರ್ಕಾರದ ಪ್ರಮಾಣ ಪತ್ರವನ್ನು ನೀಡಿ, ತರಬೇತಿಯನ್ನು ಪಡೆದುಕೊಂಡ ಶೇ.70 ರಷ್ಟು ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಅಥವಾ ವೇತನಾಧಾರಿತ ಉದ್ಯೋಗವನ್ನು ಕಲ್ಪಿಸಲಾಗುವುದು. **ಸದರಿ ಉಪಘಟಕದಡಿ 2020-21 & 2021-22ನೇ ಸಾಲಿನಲ್ಲಿ ಒದಗಿಸಲಾದ ಸೌಲಭ್ಯದ ವಿವರ ಈ ಕೆಳಕಂಡಂತಿರುತ್ತದೆ.** 2020-21 & 2021-22ನೇ ಸಾಲಿನಲ್ಲಿ ಕ್ರಮವಾಗಿ 6647&13049 ಫಲಾನುಭವಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗಿರುತ್ತದೆ. **4)ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ:** ಸದರಿ ಉಪಘಟಕದಡಿ ನಗರದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರವನ್ನು ವಿತರಿಸಲಾಗುವುದು. ಪಿಎಂ ಸ್ವ-ನಿಧಿ ಯೋಜನೆಯಡಿ ಬೀದಿ ವ್ಯಾಪಾರಿಗಳಿಗೆ ಪ್ರಾಥಮಿಕ ಹಂತದಲ್ಲಿ ರೂ.10,000/- ತದನಂತರ ನಿಯಮಿತವಾಗಿ ಸಾಲ ಮರುಪಾವತಿ ಆಧಾರದ ಮೇಲೆ ರೂ.20,000/- ಮತ್ತು ರೂ.50,000/-ಗಳ ವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಒದಗಿಸಲಾಗುವುದು. ಸದರಿ ಸಾಲದ ಮೊತ್ತಕ್ಕೆ ಶೇ.7 ರವರೆಗೆ ತಗಲುವ ಬಡ್ಡಿ ಸಹಾಯಧನವನ್ನು ಕೇಂದ್ರ ಸರ್ಕಾರವು ಭರಿಸಿ ಪಾವತಿಸುತ್ತದೆ. **ಸದರಿ ಉಪಘಟಕದಡಿ 2020-21 & 2021-22ನೇ ಸಾಲಿನಲ್ಲಿ ಒದಗಿಸಲಾದ ಸೌಲಭ್ಯದ ವಿವರ ಈ ಕೆಳಕಂಡಂತಿರುತ್ತದೆ.** 2020-21 & 2021-22ನೇ ಸಾಲಿನಲ್ಲಿ ಕ್ರಮವಾಗಿ 25141 & 393 ಬೀದಿ ವ್ಯಾಪಾರಿಗಳನ್ನು ಗುರುತಿಸಿ 16534 & 1073 ಬೀದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ, 63576 & 30860 ಮಾರಾಟ ಪ್ರಮಾಣ ಪತ್ರವನ್ನು ವಿತರಿಸಲಾಗಿರುತ್ತದೆ. ಪಿಎಂ ಸ್ವ-ನಿಧಿ ಯೋಜನೆಯಡಿ ಒಟ್ಟು 242813 ಅರ್ಜಿಗಳು ಸ್ವೀಕೃತವಾಗಿದ್ದು, 175643 ಅರ್ಜಿಗಳಿಗೆ ಮಂಜೂರಾತಿ ನೀಡಿದ್ದು ಈ ಪೈಕಿ 175643 ಬೀದಿ ವ್ಯಾಪಾರಿಗಳಿಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಒದಗಿಸಲಾಗಿರುತ್ತದೆ. **4)ನಗರದ ವಸತಿ ರಹಿತರಿಗೆ ಆಶ್ರಯ:** ಸದರಿ ಉಪಘಟಕದಡಿ ನಗರದ ವಸತಿ ರಹಿತರನ್ನು ರ್‍ಯಾಪಿಡ್ ಸಮೀಕ್ಷೆಯ ಮೂಲಕ ಗುರುತಿಸಿ, ಆಶ್ರಯವನ್ನು ಕಲ್ಪಿಸಲಾಗುವುದು ಹಾಗೂ ಹೊಸ ಆಶ್ರಯ ನಿರ್ಮಾಣ, ಆಶ್ರಯ ನವೀಕರಣಕ್ಕೆ ಬೆಂಬಲವನ್ನು ನೀಡಲಾಗುವುದು. **ಸದರಿ ಉಪಘಟಕದಡಿ 2020-21 & 2021-22ನೇ ಸಾಲಿನಲ್ಲಿ ಒದಗಿಸಲಾದ ಸೌಲಭ್ಯದ ವಿವರ ಈ ಕೆಳಕಂಡಂತಿರುತ್ತದೆ.** 2020-21 & 2021-22ನೇ ಸಾಲಿನಲ್ಲಿ 1840 & 2320 ವಸತಿ ರಹಿತರಿಗೆ ತಾತ್ಕಾಲಿಕವಾಗಿ ಆಶ್ರಯವನ್ನು ಕಲ್ಪಿಸಲಾಗಿರುತ್ತದೆ.

	ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM) ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಮಹಿಳೆಯರ ಸ್ವಸಹಾಯ ಗುಂಪುಗಳ ಫಲಾನುಭವಿಗಳಿಗೆ ಎನ್‌ಆರ್‌ಎಲ್‌ಎಂ ಮತ್ತು ಇತರೆ ಯೋಜನೆಗಳ ಸೌಲಭ್ಯಗಳು, ಹಣಕಾಸು ನಿರ್ವಹಣೆ, ಉಳಿತಾಯದ ದಶಸೂತ್ರಗಳು, ಮುಂತಾದ ತರಬೇತಿ ಹಾಗೂ ಮಾರ್ಗದರ್ಶನ ನೀಡಲಾಗುತ್ತಿದೆ. ಯೋಜನೆಯ ನಿಯಮಾವಳಿಗಳಂತೆ ಸುತ್ತು ನಿಧಿ, ಸಮುದಾಯ ಬಂಡವಾಳ ನಿಧಿ, ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವ ಯೋಜನೆಗಳ ಸೌಲಭ್ಯಗಳನ್ನು ಅರ್ಹ ಗ್ರಾಮೀಣ ಸ್ವಸಹಾಯ ಗುಂಪಿನ ಫಲಾನುಭವಿಗಳಿಗೆ ಒದಗಿಸಲಾಗುತ್ತಿದೆ. • **ಸುತ್ತುನಿಧಿ** : ಹೊಸ ಮತ್ತು ಬ್ಯಾಂಕ್ ಸಾಲ ಪಡೆಯದ ಸ್ವಸಹಾಯ ಗುಂಪುಗಳಿಗೆ, ಬ್ಯಾಂಕ್ ಸಾಲ ಪಡೆಯಲು ಅನುವಾಗುವಂತೆ ಮತ್ತು ಆರ್ಥಿಕವಾಗಿ ಸಬಲರಾಗುವಂತೆ ಮಾಡಲು ಅರ್ಹ ಗುಂಪುಗಳನ್ನು ಗುರ್ತಿಸಿ, ಶ್ರೇಣೀಕರಣ ಮಾಡಿ ಗರಿಷ್ಠ ರೂ. 15000/- ಗಳನ್ನು ಅನುದಾನದ ರೂಪದಲ್ಲಿ ಒದಗಿಸುವುದು. • **ಸಮುದಾಯ ಬಂಡವಾಳ ನಿಧಿ:** (ಸಿ.ಐ.ಎಫ್) ಜೀವನೋಪಾಯ ಉದ್ಯೋಗಗಳನ್ನು ಕೈಗೊಳ್ಳಲು ಗ್ರಾಮ ಪಂಚಯತಿ ಮಟ್ಟದ ಒಕ್ಕೂಟಗಳ ಮೂಲಕ ರೂ.1,50,000/- ಗಳನ್ನು ಸಮುದಾಯ ಬಂಡವಾಳ ನಿಧಿಯನ್ನು ನೀಡಲಾಗುವುದು. • **ಸ್ವಸಹಾಯ ಗುಂಪುಗಳ ಬ್ಯಾಂಕ್ ಲಿಂಕೇಜ್** : ಅರ್ಹ ಮಹಿಳಾ ಫಲಾನುಭವಿಗಳಿಗೆ ಅವರು ಉತ್ಪಾದಿಸುವ ಉತ್ಪನ್ನಗಳ ಹೆಚ್ಚಿಸಲು ಬ್ಯಾಂಕ್ ಲಿಂಕೇಜ್ ನಿಂದ ಅನುದಾನದ ಬೆಂಬಲವನ್ನು ನೀಡುವ ಮೂಲಕ ಬಡಜನರ ಆರ್ಥಿಕ ಭದ್ರತೆ/ಸುರಕ್ಷತೆಯನ್ನು ಉತ್ತೇಜಿಸಲಾಗುತ್ತಿದೆ. • ಸ್ವಸಹಾಯ ಗುಂಪಿನ ಫಲಾನುಭವಿಗಳು ಜೀವನೋಪಾಯ ಉದ್ಯೋಗಗಳನ್ನು ಕೈಗೊಳ್ಳುವಲ್ಲಿ ಹಾಗೂ ಉದ್ದಿಮೆದಾರರನ್ನಾಗಿಸಲು ಸೂಕ್ತ ಮಾರ್ಗದರ್ಶನ ಹಾಗೂ ಅವಶ್ಯ ತರಬೇತಿ ಮತ್ತು ತಾಂತ್ರಿಕ ಬೆಂಬಲಗಳನ್ನು ಯೋಜನೆಯಡಿ ಒದಗಿಸಲಾಗುತ್ತಿದೆ. • ಮಹಿಳೆಯರು ಉತ್ಪಾದಿಸುವ ಉತ್ಪನ್ನಗಳಿಗೆ ಮೌಲ್ಯವರ್ಧನೆ, ಬ್ರಾಂಡಿಂಗ್, ಪ್ಯಾಕಿಂಗ್, ಎಫ್‌ಎಸ್‌ಎಸ್‌ಎಐ ಸನ್ನದು, ಜಿಎಸ್‌ಟಿ ಪಡೆಯಲು, ಸಾಮಾನ್ಯ ಹಾಗೂ ಆನ್‌ಲೈನ್ ಮಾರುಕಟ್ಟೆ ಸೌಲಭ್ಯಗಳನ್ನು ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಗಳ ವ್ಯವಸ್ಥೆಗಳನ್ನು ಕೈಗೊಳ್ಳಲಾಗುತ್ತಿದೆ. • ವಿವಿಧ ಸಹ ಇಲಾಖೆಗಳಾದ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಒಗ್ಗೂಡಿಸುವಿಕೆ ಕಾರ್ಯಕ್ರಮದಡಿ, ಮಹಿಳೆಯರಿಗೆ ಜಾಬ್ ಕಾರ್ಡ, ವಿವಿಧ ಕಾರ್ಯಕ್ರಮಗಳಾದ ಕುರಿ, ಮೇಕೆ, ಹಂದಿ, ಮುಂತಾದವುಗಳ ಸಾಕಾಣಿಗೆ ಶೆಡ್‌ಗಳ ನಿರ್ಮಾಣ ವ್ಯವಸ್ಥೆ, ಕೃಷಿ ಇಲಾಖೆಯಿಂದ ಸಮಗ್ರ ಕೃಷಿ ನಿರ್ವಹಣ ಪದ್ಧತಿ ಅನುಷ್ಠಾನ, ಸಾವಯವ ಕೃಷಿ ಪದ್ಧತಿ ಅಳವಡಿಕೆ, ಕೃಷಿ ಪೌಷ್ಠಿಕ ಕೈತೋಟಗಳ ನಿರ್ಮಾಣ, ಮತ್ತು ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದಡಿ ಕೃಷಿ ಯಂತ್ರೋಪಕರಣ ಬಾಡಿಗೆ ಕೇಂದ್ರಗಳ ಸೌಲಭ್ಯಗಳನ್ನು ಮಹಿಳೆಯರಿಗೆ ಒದಗಿಸಲಾಗುತ್ತಿದೆ. ತೋಟಗಾರಿಕೆ ಪಶುಸಂಗೋಪನೆ ಇಲಾಖೆಗಳ ಸೌಲಭ್ಯಗಳ ವ್ಯವಸ್ಥೆ ಕಲ್ಪಿಸಲು ನಿರಂತರ ಕ್ರಮ ಜರುಗಿಸಲಾಗುತ್ತಿದೆ.

	<u>ಸಿಡಾಕ್</u> ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರದಿಂದ ಗ್ರಾಮಾಂತರ ನಗರ ಪಟ್ಟಣ ಹಾಗೂ ಮಹಾ ನಗರ ಪ್ರದೇಶಗಳಲ್ಲಿನ ಬಡ ಮತ್ತು ಮಧ್ಯಮ ವರ್ಗದ ಕಾರ್ಮಿಕರಿಗೆ, ಅಪೇಕ್ಷಿತ ಫಲಾನುಭವಿಗಳ ಪೈಕಿ ಆಸಕ್ತರಿಗೆ ಸ್ವಯಂ ಉದ್ಯೋಗ ಅವಕಾಶಗಳ ಕುರಿತು ಮಾಹಿತಿ, ಮಾರ್ಗದರ್ಶನ, ತರಬೇತಿ ಹಾಗೂ ಬೆಂಬಲ ಸೇವೆಗಳನ್ನು ನೀಡಿ ಅವರುಗಳು ಉದ್ಯಮಶೀಲರಾಗುವಲ್ಲಿ ನೆರವು ನೀಡಲಾಗುತ್ತಿದೆ.
(ಆ) ವಿಶೇಷತ: ಮಹಾನಗರ ಪ್ರದೇಶಗಳಿಗೆ ದೇಶದಾದ್ಯಂತ ಕಾರ್ಮಿಕ ವರ್ಗದವರು ಬರುತ್ತಿದ್ದು, ಅವರಿಗೆ ವೃತ್ತಿ ಕೌಶಲ್ಯ ಅಥವಾ ಅವರು ಬಯಸುವ ವೃತ್ತಿ ಕೌಶಲ್ಯ ನೀಡಿಕೆ ಕುರಿತು ಹಮ್ಮಿಕೊಂಡ ಕಾರ್ಯಕ್ರಮಗಳೇನು;	<u>ಕೌಶಲ್ಯ ಮಿಷನ್</u> ಕಾರ್ಮಿಕರಿಗೆ ಪ್ರತ್ಯೇಕವಾಗಿ Recognition of Prior Learning (RPL) ಪೂರ್ವ ಕಲಿಕೆ ಗುರುತಿಸುವಿಕೆಯಡಿ ತರಬೇತಿಯನ್ನು ನೀಡಿ ಪ್ರಮಾಣ ಪತ್ರ ನೀಡಲಾಗುತ್ತಿದೆ. ಮುಂದುವರೆದು ಕೋವಿಡ್ – 19 ರ ಸಾಂಕ್ರಾಮಿಕ ಬಿಕ್ಕಟಿನ ಸಮಯದಲ್ಲಿ 150 ವಲಸೆ ಕಾರ್ಮಿಕರಿಗೆ ಉಚಿತ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, Domestic Data Entry Operator ಜಾಬ್‌ರೋಲ್ ನಡಿ ಹಾಗೂ Field Technician and Computer Peripherals ಜಾಬ್‌ರೋಲ್ ನಡಿ ತರಬೇತಿ ನೀಡಲಾಗಿದೆ. <u>ಡೇ-ನಲ್ಮ್</u> ಡೇ-ಎನ್‌ಯುಎಲ್‌ಎಂ ಅಭಿಯಾನದ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ ಉಪಘಟಕದಡಿ ಅಭಿಯಾನದಡಿ ರಾಜ್ಯದ ಒಟ್ಟು 11 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 2020-21ರ ಸಾಲಿನಲ್ಲಿ 2,541 ಮತ್ತು 2021-22ರ ಸಾಲಿನಲ್ಲಿ 3,447 ಅರ್ಹ ಫಲಾನುಭವಿಗಳಿಗೆ ವೃತ್ತಿ ಕೌಶಲ್ಯ ತರಬೇತಿಯನ್ನು ನೀಡಲಾಗಿರುತ್ತದೆ.
(ಇ) ರಾಜ್ಯದಲ್ಲಿರುವ ಪಾರಂಪರಿಕ ಕುಲವೃತ್ತಿಗಳೆಂದು ಪರಿಗಣಿಸಿ ಅದನ್ನೇ ಮುಂದುವರೆಸಿಕೊಂಡು ಬರುತ್ತಿರುವ ಗುಡಿ ಕೈಗಾರಿಕೆಗಳು, ನೇಕಾರಿಕೆ, ಕುಂಬಾರಿಕೆ, ಮತ್ತಿತರ ವೃತ್ತಿಗಳಲ್ಲಿರುವವರಿಗೆ ಅವರದೆ ವೃತ್ತಿಗೆ ಹೆಚ್ಚಿನ ಆಧುನಿಕರಣ ಕೌಶಲ್ಯ ತರಬೇತು ನೀಡುವ ಕುರಿತು ಇಲಾಖೆಯು ರೂಪಿಸಿ, ಜಾರಿಗೊಳಿಸುತ್ತಿರುವ ಕಾರ್ಯಕ್ರಮಗಳೇನು?	<u>ಕೌಶಲ್ಯ ಮಿಷನ್</u> ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದಿಂದ ಈಗಾಗಲೇ "ಒಂದು ಜಿಲ್ಲೆ ಒಂದು ಕೌಶಲ್ಯ" ಎಂಬ ಶೀರ್ಷಿಕೆಯಡಿ ಕಾರ್ಯಕ್ರಮವನ್ನು ರೂಪಿಸಲಾಗಿದ್ದು, ರಾಜ್ಯದ 31 ಜಿಲ್ಲೆಗಳಲ್ಲಿ ಆಯಾ ಜಿಲ್ಲೆಯಲ್ಲಿ ಜಾರಿಯಲ್ಲಿರುವ ಪಾರಂಪರಿಕ ಕುಲವೃತ್ತಿಗಳೆಂದು ಗುರುತಿಸಲ್ಪಟ್ಟಿರುವ **(ಅನುಬಂಧದಲ್ಲಿ ನೀಡಿರುವಂತೆ)** ವೃತ್ತಿ / ಕಲೆಗಳಡಿ ಆಯಾ ಜಿಲ್ಲೆಯ ಕನಿಷ್ಠ 100 ಕುಶಲಕರ್ಮಿಗಳಿಗೆ ಅವರದೆ ವೃತ್ತಿಗೆ ಹೆಚ್ಚಿನ ಆಧುನಿಕರಣದೊಂದಿಗೆ ಸಾಂಪ್ರದಾಯಿಕ ಕಲೆ ಮತ್ತು ಕರಕುಶಲ ತಯಾರಿಕೆಯ ತಂತ್ರಗಳೊಂದಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು / ಉದ್ಯಮಶೀಲನ್ನಾಗಿಸಲು, ಅವಶ್ಯ ತರಬೇತಿ, ಮಾರುಕಟ್ಟೆ ಸಂಪರ್ಕ ಹಾಗೂ ಸಾಲಸೌಲಭ್ಯವನ್ನು ನೀಡುವ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಅದರಂತೆ ಮೇದಾರ ಜನಾಂಗದ ಹಾಗೂ ಕಿನ್ನಳ ಬೊಂಬೆಗಳ ತಯಾರಿಕಾ ತರಬೇತಿ ಕಾರ್ಯಕ್ರಮಕ್ಕೆ ಕಾರ್ಯಾದೇಶ ನೀಡುವ ಕಾರ್ಯವು ಪ್ರಗತಿಯಲ್ಲಿರುತ್ತದೆ. ಈ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ, National Institute of Design-Ahmadabad, National Institute of Fashion Technology – Bangalore, NABARD, KSHDCL, KVIC, Deshpande Foundation, TATA Trust, Flipkart, TRIFED, EPCH..,etc ಸಂಸ್ಥೆಗಳ ಸಹಯೋಗದೊಂದಿಗೆ ಜಾರಿಗೊಳಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. <u>ಡೇ-ನಲ್ಮ್</u> ಡೇ-ಎನ್‌ಯುಎಲ್‌ಎಂ ಅಭಿಯಾನವು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಕೇಂದ್ರ ಸರ್ಕಾರವು 375 ವಿವಿಧ ಕೌಶಲ್ಯಾಭಿವೃದ್ಧಿ ತರಬೇತಿ ವಿಷಯಗಳನ್ನು ತಿಳಿಸಿದ್ದು, ಅದರಂತೆ ನಗರ ಸ್ಥಳೀಯ ಸಂಸ್ಥೆಗಳ ಬೇಡಿಕೆಗೆ ಅನುಗುಣವಾಗಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. <u>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM)</u> • ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತುತ ವರ್ಷದ ಆಯವ್ಯಯದಲ್ಲಿ ಘೋಷಿಸಿರುವಂತೆ ರಾಜ್ಯದಲ್ಲಿರುವ ಪಾರಂಪರಿಕ ಕುಲವೃತ್ತಿಗಳ ಉತ್ತೇಜನ, ವೇತನ, ವಹಿವಾಟು, ಉದ್ಯೋಗ ಮತ್ತು ರಫ್ತು ಹೆಚ್ಚಳ

	ಗುರಿಯೊಂದಿಗೆ ಚಿಕ್ಕಬಳ್ಳಾಪುರದಲ್ಲಿ ಚರ್ಮದ ಬೊಂಬೆ, ಧಾರವಾಡದಲ್ಲಿ ಕಸೂತಿ, ಕೊಪ್ಪಳದಲ್ಲಿ ಕೌದಿ ಮತ್ತು ಕಿನ್ನಾಳ ಬೊಂಬೆ, ಮೈಸೂರಿನಲ್ಲಿ ಅಗರಬತ್ತಿ, ನವಲಗುಂದದಲ್ಲಿ ಜಮಖಾನಾ, ಚನ್ನಪಟ್ಟಣದಲ್ಲಿ ಆಟಿಕೆ, ಇಳಕಲ್–ಗುಳೇದಗುಡ್ಡ, ಬೆಳಗಾವಿ–ಶಹಾಪುರ, ಶಿಡ್ಲಘಟ್ಟ ಮತ್ತು ಮೊಳಕಾಲ್ಮೂರುಗಳಲ್ಲಿ ಸೀರೆ ಮೈಕ್ರೋಕ್ಲಸ್ಟರ್ ಅನ್ನು ಅಭಿವೃದ್ಧಿ ಪಡಿಸಲು ಯೋಜನಾ ಅನುಷ್ಠಾನ ಸಂಸ್ಥೆಗಳ ಮೂಲಕ ಕಾರ್ಯಕ್ರಮ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. • ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯು ಪಾರಂಪರಿಕ ಕೌಶಲ್ಯಗಳ ಅಭಿವೃದ್ಧಿ ಹಾಗೂ ಮುಂದುವರೆಸಿಕೊಂಡು ಹೋಗವ ನಿಟ್ಟಿನಲ್ಲಿ ಗ್ರಾಮೀಣ ಮಹಿಳೆಯರಿಗೆ ಸೂಕ್ತ ತರಬೇತಿಗಳನ್ನು ನೀಡಲು ಈ ಕ್ಷೇತ್ರದಲ್ಲಿ ಅನುಭವಿ ಮತ್ತು ನುರಿತ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಲು ಕ್ರಮ ಕೈಗೊಳ್ಳಲಾಗಿದೆ.

ಸಂಖ್ಯೆ: ಕೌಉಜೀಇ 32 ಉಜೀಪ್ರ 2022

(ಡಾ॥ ಅಶ್ವಥ್ ನಾರಾಯಣ .ಸಿ.ಎನ್)
ಉನ್ನತ ಶಿಕ್ಷಣ, ವಿದ್ಯುನ್ಮಾನ, ಐಟಿ–ಬಿಟಿ ವಿಜ್ಞಾನ ಮತ್ತು
ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು

ಅನುಬಂಧ

"ಒಂದು ಜಿಲ್ಲೆ ಒಂದು ಕೌಶಲ್ಯ" ಎಂಬ ಶೀರ್ಷಿಕೆಯಡಿ ಜಿಲ್ಲಾವಾರು ಗುರುತಿಸಲ್ಪಟ್ಟಿರುವ ಪಾರಂಪರಿಕ ಕುಲವೃತ್ತಿಗಳ / ಸಾಂಪ್ರದಾಯಿಕ ಕಲೆ / ಕರಕುಶಲ ತಯಾರಿಕೆಯ ತಂತ್ರಗಳ ವಿವರ ಪಟ್ಟಿ

Sl No	District	ODOS
1	Bagalkot	IlkalSaree
2	Ballari	LambaniKasuti
3	Bangalore Rural	SilkSareeweaving
4	BangaloreUrban	Bronze ware
5	Belgavi	KolhapuriChappalandLeatherGoods
6	Bidar	Bidri Arts
7	Chamarajanagar	SilkWeaving
8	Chikkaballapur	CocoonCraft
9	Chikmagalur	CoffeeStemandRootCrafts
10	Chitradurga	Sheep WoolBlanket
11	DakshinKannada	PotteryandClayMaterial
12	Davangere	ArecaLeafProducts
13	Dharwad	DharwadKasuti
14	Gadag	KhoudiMaking
15	Hassan	CoirProducts
16	Haveri	CardamomGarlands
17	Kalaburgi	Woodcraft
18	Kodagu	BambooWorks
19	Kolar	StoneCarvingandSculpting
20	Koppal	KinnalToys
21	Mandya	KodiyalaSarees
22	Mysuru	RosewoodInlay
23	Raichur	BambooCrafts
24	Ramanagara	Channapatna Toys
25	Shivamogga	HaseChittara
26	Tumkur	WoollenBlanket
27	Udupi	PotteryMaking
28	UttarKannada	ArtisanalWoodCrafts
29	Vijayapura	LambaniKasuti
30	Vijaynagar	StoneCarvingandSculpting
31	Yadgiri	LambaniKasuti

(21)

ಕರ್ನಾಟಕ ವಿಧಾನ ಸಭೆ

15ನೇ ವಿಧಾನಸಭೆ 13ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**149**
ಸದಸ್ಯರ ಹೆಸರು	:	**ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)**
ಉತ್ತರಿಸುವ ದಿನಾಂಕ	:	**15.09.2022**
ಉತ್ತರಿಸುವವರು	:	**ಸನ್ಮಾನ್ಯ ಮುಖ್ಯಮಂತ್ರಿಗಳು**

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿನ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಬದಿಯಲ್ಲಿ ಸಾಲು ಮರಗಳನ್ನು ಬೆಳೆಸುವ ಕುರಿತು ಹಮ್ಮಿಕೊಂಡ ಯೋಜನಾನುಷ್ಠಾನದ ಕುರಿತು ಕಳೆದೆರಡು ಆರ್ಥಿಕ ವರ್ಷಗಳ ಸಾಧನೆಯ ವಿವರಗಳನ್ನು ನೀಡುವುದು</td><td>ರಾಜ್ಯದಲ್ಲಿನ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಬದಿಯಲ್ಲಿ ಲೆಕ್ಕ ಶೀರ್ಷಿಕೆ 2406-01-101-2-21-ಅರಣ್ಯೇತರ ಪ್ರದೇಶಗಳಲ್ಲಿ ಅರಣ್ಯೀಕರಣ-139-ಪ್ರ.ಕಾ ರಡಿ ಕಳೆದೆರಡು ಆರ್ಥಿಕ ವರ್ಷಗಳಲ್ಲಿ ನೆಡುತೋಪು ನಿರ್ಮಾಣ ಮಾಡಿರುವ ವಿವರಗಳು ಈ ಕೆಳಕಂಡಂತಿವೆ:-
<table>
<tr><th>ಕ್ರ. ಸಂ.</th><th>ವರ್ಷ</th><th>ಬೆಳೆಸಿದ ನೆಡುತೋಪು (ಕಿ.ಮೀ.ಗಳಲ್ಲಿ)</th></tr>
<tr><td>1</td><td>2020-21</td><td>85.571</td></tr>
<tr><td>2</td><td>2021-22</td><td>218.44</td></tr>
<tr><td></td><td>ಒಟ್ಟು:</td><td>304.011</td></tr>
</table></td></tr>
<tr><td>ಆ)</td><td>ಈ ಅವಧಿಯಲ್ಲಿ ಯಾವ ಯಾವ ಹೆದ್ದಾರಿಗಳಲ್ಲಿ ಎಷ್ಟು ಪ್ರಮಾಣದ ಮರಗಳನ್ನು ಬೆಳೆಸುವ / ಸಸಿ ನೆಡುವ ಕುರಿತು ಕ್ರಮ ಜರುಗಿಸಲಾಗಿದೆ;</td><td>ಈ ಅವಧಿಯಲ್ಲಿ ನೆಡುತೋಪು ನಿರ್ಮಾಣ ಮಾಡಿರುವ ಹೆದ್ದಾರಿಗಳ ಮತ್ತು ನೆಟ್ಟ ಸಸಿಗಳ ವಿವರಗಳು ಕೆಳಕಂಡಂತಿದೆ:-
<table>
<tr><th>ವರ್ಷ</th><th>ಹೆದ್ದಾರಿ ಹೆಸರು</th><th>ನೆಡುತೋಪು ನಿರ್ಮಾಣ (ಕಿ.ಮೀ.ಗಳಲ್ಲಿ)</th><th>ನೆಟ್ಟ ಸಸಿಗಳ ಸಂಖ್ಯೆ</th></tr>
<tr><td rowspan="2">2020-21</td><td>ಎನ್.ಹೆಚ್-209 ಮಳವಳ್ಳಿ ಐ.ಬಿ. ಸರ್ಕಲ್ ನಿಂದ ಮಳವಳ್ಳಿ ತಾಲ್ಲೂಕು ಸರಹದ್ದುವರೆಗೆ</td><td>35.771</td><td>7154.20</td></tr>
<tr><td>ಎನ್.ಹೆಚ್-150ಎ – ನಾಗಮಂಗಲ ಹೊಸಮನೆ ಗೇಟ್ ಇಂದ ಪಾಂಡವಪುರ ಅಶೋಕನಗರವರೆಗೆ</td><td>49.80</td><td>9960</td></tr>
<tr><td></td><td>ಒಟ್ಟು:</td><td>85.571</td><td>17114.20</td></tr>
</table></td></tr>
</table>

ಕ್ರ. ಸಂ.	ಪ್ರಶ್ನೆ	ಉತ್ತರ

2021-22	ಕಡೂರು-ಚಿಕ್ಕಮಗಳೂರು ಎನ್.ಹೆಚ್.173	20.60	4120
	ಎನ್.ಹೆಚ್-13, ಸೋಲಾಪುರ ದಿಂದ ವಿಜಯಪುರ	21.72	4344
	ಎನ್.ಹೆಚ್-218, ವಿಜಯಪುರ ದಿಂದ ಹುಬ್ಬಳ್ಳಿ	33.59	6718
	ಎನ್.ಹೆಚ್-50, ವಿಜಯಪುರ ದಿಂದ ಗುಲಬರ್ಗಾ	64.38	12876
	ಎನ್.ಹೆಚ್-63 ಅಂಕೋಲಾ-ಗುತ್ತಿ	37.65	7530
	ಬೀದರ್-ಚಿಂಚೋಳಿ-ತುಮಕುಂಟಾ	17	3400
	ಕೆರಗೂಡು ಪೊಲೀಸ್ ಠಾಣೆ-ಬೆಸ್ತರಕೊಪ್ಪಲು ವರೆಗೆ	7	1400
	ಚಂದಗಾಲು-ಕೊತ್ತಗೆರೆ ವರೆಗೆ	2	400
	ಮದ್ದೂರು-ಕೊಪ್ಪ-ನಾಗಮಂಗಲ ರಾ.ಹೆ. ಲಿಂಕ್ ರಸ್ತೆ ಅರೆಕಲ್ಲುದೊಡ್ಡಿ ಗೇಟ್ ನಿಂದ ಕುಂಟನಹಳ್ಳಿ ಗೇಟ್ ವರೆಗೆ	6	1200
	ಮಂಡ್ಯ-ನಾಗಮಂಗಲ ಲಿಂಕ್ ಸೋಮನಹಳ್ಳಿ-ಮಾರಂಗೆರೆ-ಅಬಲವಾಡಿ	3	600
	ಎನ್.ಹೆಚ್ ಕಾಪು-ಮೂಡಬೆಟ್ಟು	5.5	1100
	ಒಟ್ಟು	**218.44**	**43688**
	ಒಟ್ಟಾರೆ	**304.011**	**60802.20**

ಇ)	ಈ ಯೋಜನಾನುಷ್ಠಾನಕ್ಕಾಗಿ ಸರ್ಕಾರ ಕಳೆದೆರಡು ಆರ್ಥಿಕ ವರ್ಷಗಳಲ್ಲಿ ಮಂಜೂರು ಮಾಡಿದ ಅನುದಾನವೆಷ್ಟು:	ಈ ಯೋಜನಾನುಷ್ಠಾನಕ್ಕಾಗಿ ಸರ್ಕಾರ ಕಳೆದೆರಡು ಆರ್ಥಿಕ ವರ್ಷಗಳಲ್ಲಿ ಮಂಜೂರು ಮಾಡಿದ ಅನುದಾನದ ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ವರ್ಷ	ಮಂಜೂರು ಮಾಡಿದ ಅನುದಾನ
1	2020-21	128.903
2	2021-22	354.844
ಒಟ್ಟು:		**483.747**

ಈ)	ರಾಜ್ಯದಲ್ಲಿನ ಎಲ್ಲಾ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಮರ ಬೆಳೆಸುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಕೈಗೊಳ್ಳಲಾಗಿದೆಯೇ; ಹೌದಾದಲ್ಲಿ ಆ ಕುರಿತಾದ ವಿವರಗಳೇನು;	ಹೌದು, ಯಶಸ್ವಿಯಾಗಿ ಕೈಗೊಳ್ಳಲಾಗಿರುತ್ತದೆ. **ವಿವರಗಳನ್ನು ಉತ್ತರ (ಆ)ರಲ್ಲಿ ಒದಗಿಸಲಾಗಿದೆ.**

ಕ್ರ. ಸಂ.	ಪ್ರಶ್ನೆ	ಉತ್ತರ
ಊ)	ಸಸಿ ನೆಡುವ ಮತ್ತು ಮರ ಬೆಳೆಸುವ ಯೋಜನೆಯಡಿಯಲ್ಲಿ ಎಷ್ಟು ಗುತ್ತಿಗೆದಾರರಿಗೆ ಮತ್ತು ಸಂಸ್ಥೆಗಳಿಗೆ ಅವಕಾಶವನ್ನು ಒದಗಿಸಿಕೊಡಲಾಗಿದೆ; ಆ ಕುರಿತಾದ ವಿವರಗಳನ್ನು ನೀಡುವುದು?	ಸದರಿ ಕಾಮಗಾರಿಯನ್ನು ನಿರ್ವಹಿಸಲು ಯಾವುದೇ ಬಿಡ್ಡುದಾರರು ಟೆಂಡರ್‌ನಲ್ಲಿ ಭಾಗವಹಿಸದೇ ಇದ್ದುದರಿಂದ ಇಲಾಖಾ ಮುಖಾಂತರ ತುಂಡು ಗುತ್ತಿಗೆಯ ಆಧಾರದಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ.

ಸಂಖ್ಯೆ: ಅಪಜೀ 36 ಎಫ್ ಟಿಎಸ್ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 150
ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
ಉತ್ತರಿಸುವ ದಿನಾಂಕ : 15-09-2022
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ ಸಕಾಲ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಪದವಿ ಪೂರ್ವ ದ್ವಿತೀಯ ವರ್ಷದ ಪರೀಕ್ಷೆಗಳ ಮೌಲ್ಯಮಾಪನದ ಸುವ್ಯವಸ್ಥೆಗಾಗಿ ಲೋಪದೋಷ ರಹಿತ ಕ್ರಮಗಳು ಯಾವುವು;	ರಾಜ್ಯದಲ್ಲಿ ಪದವಿ ಪೂರ್ವ ದ್ವಿತೀಯ ವರ್ಷದ ಪರೀಕ್ಷೆಗಳ ಮೌಲ್ಯಮಾಪನದ ಸುವ್ಯವಸ್ಥೆಗಾಗಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ- 1. ದ್ವಿತೀಯ ಪಿಯು ಮೌಲ್ಯಮಾಪನ ಕಾರ್ಯಗಳಿಗೆ ಅನುಭವಿ ಹಿರಿತನದ ಆಧಾರದ ಮೇಲೆ ಪ್ರಾಂಶುಪಾಲರು / ಉಪನ್ಯಾಸಕರನ್ನು ನೇಮಿಸಲಾಗುತ್ತಿದೆ. 2. ಅಪೇಕ್ಷಿತ ವಿದ್ಯಾರ್ಥಿಗಳಿಗೆ ಸ್ಕ್ಯಾನ್ಡ್ ಉತ್ತರ ಪತ್ರಿಕೆ ನೀಡುವಿಕೆ, ಮರುಎಣಿಕೆ ಮತ್ತು ಮರುಮೌಲ್ಯಮಾಪನಕ್ಕಾಗಿ ಅವಕಾಶ ನೀಡಲಾಗುತ್ತದೆ. 3. ಮೌಲ್ಯಮಾಪನಕ್ಕಿಂತ ಮೊದಲು ಉಪಮುಖ್ಯ ಮೌಲ್ಯಮಾಪಕರಿಗೆ ಹಾಗೂ ಸಹಾಯಕ ಮೌಲ್ಯಮಾಪಕರಿಗೆ ಮೌಲ್ಯಮಾಪನ ಸಂದರ್ಭದಲ್ಲಿ ಜಾಗರೂಕತೆ ವಹಿಸಿ ಕಾರ್ಯ ನಿರ್ವಹಿಸುವಂತೆ ಸಭೆಗಳನ್ನು ನಡೆಸಿ ಸಲಹೆ ಸೂಚನೆಗಳನ್ನು ಸುತ್ತೋಲೆಗಳ ಮುಖಾಂತರ ನೀಡಲಾಗುತ್ತದೆ.
ಆ)	ರಾಜ್ಯದ ಶೈಕ್ಷಣಿಕ ವಲಯದ ಪರೀಕ್ಷೆಗಳ ಮೌಲ್ಯಮಾಪನದ ಲೋಪದೋಷಗಳ ಕುರಿತು ವಿದ್ಯಾರ್ಥಿಗಳ/ಪೋಷಕರುಗಳಿಂದ ದಾಖಲಾಗಿರುವ ದೂರುಗಳು ಮತ್ತು ಆ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು;	ಪರೀಕ್ಷೆಗಳ ಮೌಲ್ಯಮಾಪನದ ಲೋಪದೋಷಗಳ ಕುರಿತು ವಿದ್ಯಾರ್ಥಿಗಳ/ಪೋಷಕರುಗಳಿಂದ ದಾಖಲಾಗಿರುವ ದೂರುಗಳಿಗೆ ಸರ್ಕಾರ ಕೈಗೊಂಡಿರುವ ಕ್ರಮ ಕೆಳಕಂಡಂತಿರುತ್ತದೆ- 1. **ಅಪೇಕ್ಷಿತ ವಿದ್ಯಾರ್ಥಿಗಳಿಗೆ** ಸ್ಕ್ಯಾನ್ಡ್ ಉತ್ತರ ಪತ್ರಿಕೆ ನೀಡಲಾಗುವುದು. 2. ಅಂಕಗಳ ಮರುಎಣಿಕೆಗೆ ಅವಕಾಶ ನೀಡಲಾಗುವುದು. 3. ಮರುಮೌಲ್ಯಮಾಪನಕ್ಕೆ ಅವಕಾಶ ನೀಡಲಾಗುವುದು 4. ಸಹಾಯವಾಣಿಯಲ್ಲಿ ವಿದ್ಯಾರ್ಥಿಗಳು/ಪೋಷಕರುಗಳಿಂದ ದೂರು ದಾಖಲಿಸಿಕೊಂಡು, ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ಮತ್ತು ಸಮಸ್ಯೆಗಳಿಗೆ ಪರಿಹಾರ ನೀಡಲಾಗುತ್ತದೆ.
ಇ)	ಪರೀಕ್ಷಾ ಮೌಲ್ಯಮಾಪನ ಪ್ರಕ್ರಿಯೆಗಳನ್ನು ಪರಿಪೂರ್ಣವಾಗಿ ಜರುಗಿಸುವಲ್ಲಿ ಸರ್ಕಾರ ನಿಗದಿಪಡಿಸಿರುವ ಕಾನೂನು /ನೀತಿ/ ನಿಯಮಗಳನ್ನು ಅನುಸರಿಸುವ ನಿಟ್ಟಿನಲ್ಲಿ ಮೌಲ್ಯಮಾಪಕರುಗಳಿಗೆ ವಿಧಿಸಿರುವ ಕಾನೂನುಬದ್ಧ ಕ್ರಮಗಳು ಯಾವುವು;	The Karnataka Pre-University Course State Level Public Examination Rules 1997 ರ ಪ್ರಕಾರ ಪರೀಕ್ಷಾ ಮೌಲ್ಯಮಾಪನ ಕಾರ್ಯದಲ್ಲಿ ತೊಡಗಿಸಿರುವ ಎಲ್ಲಾ ಅಧಿಕಾರಿ / ಸಿಬ್ಬಂದಿಗಳಿಗೆ ಪಾಲಿಸಬೇಕಾಗಿರುವ ಕ್ರಮಗಳ ಬಗ್ಗೆ ನಿರ್ದೇಶನಗಳನ್ನು ಸುತ್ತೋಲೆಗಳ ಮುಖಾಂತರ ನೀಡಲಾಗುತ್ತದೆ ಹಾಗೂ ಪರೀಕ್ಷಾ ಮೌಲ್ಯಮಾಪನ ಕೇಂದ್ರಗಳಲ್ಲಿ ಮೊಬೈಲ್ ಬಳಕೆ ನಿಷೇಧಿಸಲಾಗಿದೆ.

<table>
<tr>
<td>ಈ)</td>
<td>ಕಳೆದ ಎರಡು ಶೈಕ್ಷಣಿಕ ವರ್ಷಗಳಲ್ಲಿ ದ್ವಿತೀಯ ಪಿ.ಯು.ಪರೀಕ್ಷೆಗಳಲ್ಲಿ ಮರು ಮೌಲ್ಯಮಾಪನಕ್ಕಾಗಿ ಸಲ್ಲಿಕೆಯಾದ ಮನವಿಗಳೆಷ್ಟು;</td>
<td>
<table>
<tr><td>2020 ವಾರ್ಷಿಕ ಪರೀಕ್ಷೆ</td><td>2020 ಪೂರಕ ಪರೀಕ್ಷೆ</td><td>2021 ವಾರ್ಷಿಕ ಪರೀಕ್ಷೆ</td><td>2021 ಪೂರಕ ಪರೀಕ್ಷೆ</td><td>2022 ವಾರ್ಷಿಕ ಪರೀಕ್ಷೆ</td></tr>
<tr><td>12118</td><td>2519</td><td>ಕೋವಿಡ್ 19 ಪ್ರಯುಕ್ತ ನಡೆದಿರುವುದಿಲ್ಲ.</td><td>960</td><td>13848</td></tr>
</table>
</td>
</tr>
<tr>
<td>ಉ)</td>
<td>ಆ ಪೈಕಿ ಪ್ರಕಟಿತ ಅಂಕಗಳಿಗಿಂತ ಹೆಚ್ಚು ಮತ್ತು ಕಡಿಮೆ ಅಂಕ ಗಳಿಸಿರುವ ಪರೀಕ್ಷಾರ್ಥಿಗಳ ಸಂಖ್ಯೆ ಎಷ್ಟು;</td>
<td>
<table>
